# ಕನ್ನಡ - ಅಧ್ಯಾಪಕ ಪಠ್ಯ
# KANNADA - TEACHER TEXT

## ಮೂಲ ಪಠ್ಯ
## BASIC TEXT

ತರಗತಿ

VII

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಿಸಿದವರು:
**ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)**
ವಿದ್ಯಾಭವನ ಪೂಜಪುರ, ತಿರುವನಂತಪುರ - 695 012

2024

## ಘಟಕ 1

# ನಾಡು - ನುಡಿ

"ಜನನೀ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸೀ" ಎಂಬ ಮಾತಿನಂತೆ ಜನನಿ ಮತ್ತುಜನ್ಮಭೂಮಿ ಸ್ವರ್ಗಕ್ಕಿಂತ ಮಿಗಿಲಾದುದು.ನಮ್ಮ ನಾಡು ನುಡಿಯ ಮೇಲೆ ಅಭಿಮಾನವಿಟ್ಟುಕೊಳ್ಳಬೇಕಾದುದು ನಮ್ಮೆಲ್ಲರ ಕರ್ತವ್ಯ. ಭಾಷೆ ಕೇವಲ ಸಂವಹನದ ಮಾಧ್ಯಮವಲ್ಲ. ಅದು ನಮ್ಮ ತಾಯಿಯಂತೆ. ನಮ್ಮ ಜೀವನ ರೀತಿ ಆಚಾರ – ವಿಚಾರಗಳು ಕಲೆ, ಸಾಹಿತ್ಯ ಎಲ್ಲವೂ ಸಂಸ್ಕೃತಿಗೆ ಪೂರಕ ಹಾಗೂ ಪೋಷಕ. ಮನುಷ್ಯರನ್ನು ಸುಸಂಸ್ಕೃತ ನಾಗರಿಕರನ್ನಾಗಿ ಮಾಡಿದ ಆಲೋಚನೆ, ಪ್ರಯತ್ನ ಎಲ್ಲವೂ ಸಂಸ್ಕೃತಿ. ಆಯಾ ಕಾಲಘಟ್ಟದ ಆಗುಹೋಗುಗಳಿಗನುಸಾರವಾಗಿ ಸಂಸ್ಕೃತಿಯ ಪ್ರವಾಹವು ಬದಲಾವಣೆಗಳೊಂದಿಗೆ ಸಾಗುತ್ತಿದೆ. ಇದನ್ನು ಉಳಿಸಿ ಬೆಳೆಸುವಲ್ಲಿ ಕಲೆ, ಭಾಷೆ ಮತ್ತು ಸಾಹಿತ್ಯ ಪ್ರಧಾನ ಪಾತ್ರವನ್ನು ವಹಿಸುತ್ತವೆ. ಹಲವಾರು ಕವಿಗಳು ಕನ್ನಡ ನಾಡು ನುಡಿಯ ಕುರಿತಾಗಿ ಕವನಗಳನ್ನು ಬರೆದಿದ್ದಾರೆ. ಭಾಷಾಭಿಮಾನವನ್ನು ಬಡಿದೆಚ್ಚರಿಸುವ ಕವನಗಳು ಕನ್ನಡದಲ್ಲಿ ಯಥೇಚ್ಛವಾಗಿ ಸಿಗುತ್ತವೆ.

ಮನುಷ್ಯನಿಗೆ ತಾನಿರುವ ಭೂಮಿ ಮತ್ತು ಹೊತ್ತು ಹೆತ್ತು ಸಾಕಿ ಸಲಹಿದ ಅಪ್ಪ ಅಮ್ಮನ ಋಣವನ್ನು ತೀರಿಸಲು ಸಾಧ್ಯವಿಲ್ಲ. ಮನುಷ್ಯ ಬೆಳೆಯುತ್ತಾ ಹೋದಂತೆ ತಾನಿರುವ ಪರಿಸರದ ಮೇಲೆ ಒಂದು ರೀತಿಯ ಆಪ್ತತೆ ಬಾಂಧವ್ಯ ಬೆಳೆಯುತ್ತಾ ಹೋಗುತ್ತದೆ. ಪ್ರಾಯ ಮಾಗಿದಾಗ ಆ ಜಾಗವನ್ನು ಬಿಟ್ಟು ಹೋಗಲು ಮನಸ್ಸು ಒಪ್ಪುವುದಿಲ್ಲ. ಮಕ್ಕಳು ಬೆಳೆದು ದೊಡ್ಡವರಾಗಿ ಪಟ್ಟಣದ ದಾರಿ ಹಿಡಿದಾಗ ತಮ್ಮ ಕರುಳ ಸಂಬಂಧದಂತಿರುವ ಮಣ್ಣಿನಿಂದ ಬಿಡಿಸಿಕೊಳ್ಳಲು ಸಾಧ್ಯವಾಗದೆ ಮನೆಯ ಹಿರಿಜೀವಗಳು ಒದ್ದಾಡುತ್ತವೆ.

ಮನುಷ್ಯರು ಈ ಭೂಮಿಯ ಮೇಲೆ ಸುಖವಾಗಿ ಜೀವಿಸಬೇಕಾದರೆ ಪ್ರಕೃತಿಯಲ್ಲಿ ಒಂದು ಸಮತೋಲನವಿರಬೇಕು. ಪ್ರತಿಯೊಬ್ಬರಿಗೂ ಈ ಭೂಮಿಯ ಮೇಲೆ ಬದುಕುವ ಹಕ್ಕಿದೆ. ಆದರೆ ಬುದ್ಧಿವಂತವೆನಿಸಿಕೊಂಡ ಮನುಷ್ಯ ಅಭಿವೃದ್ಧಿಯ ಹೆಸರಿನಲ್ಲಿ ಪ್ರಕೃತಿಯ ಮೇಲೆ ಮಾಡಿದ ದೌರ್ಜನ್ಯದ ಪರಿಣಾಮವಾಗಿ ಪರಿಸರ ಮಾಲಿನ್ಯ ಹೆಚ್ಚಾಗಿದೆ. ಸುಖವೆಂಬ ಕುದುರೆಯ ಬೆನ್ನೇರಿ ಹೊರಟ ಮನುಷ್ಯನ ಮಹತ್ವಾಕಾಂಕ್ಷೆ ಭೂಮಿಯಲ್ಲಿರುವ ಸಂಪನ್ಮೂಲಗಳನ್ನು ಬೇಕಾಬಿಟ್ಟಿ ಬಳಸುವಂತೆ ಪ್ರೇರೇಪಿಸುತ್ತಿವೆ. ಉಸಿರಾಡುವ ಗಾಳಿ ಕುಡಿಯುವ ನೀರು ತಿನ್ನುವ ಆಹಾರ ಎಲ್ಲ ವಿಷಮಯವಾಗಿದೆ.

ಪ್ರಕೃತಿಯ ನಾಶ ಮನುಕುಲದ ನಾಶ ಎಂಬುದನ್ನು ವಿದ್ಯಾರ್ಥಿಗಳು ತಿಳಿಯಬೇಕು. ಅವರಲ್ಲಿ ಪರಿಸರದ ಬಗ್ಗೆ ಕಾಳಜಿ ಮೂಡಬೇಕು. ತಮ್ಮ ತಾಯಿ ನೆಲ ಮತ್ತು ಹೆತ್ತೊಡಲ ಮಣ್ಣಿನ ಸಂಬಂಧದ ಅರಿವು ಮೂಡಬೇಕು. ಕನ್ನಡ ನಾಡು ನುಡಿಯ ಕುರಿತು ಅಭಿಮಾನ ಬೆಳೆಯಬೇಕು. ಈ ಉದ್ದೇಶಗಳನ್ನು ಈಡೇರಿಸಲು 'ಕನ್ನಡಿಗರ ತಾಯಿ' 'ಋಣ' ಮತ್ತು 'ಶಾಂತಿನಗರ' ಎಂಬ ಪಾಠ ಭಾಗಗಳನ್ನು ಈ ಘಟಕದಲ್ಲಿ ಅಳವಡಿಸಲಾಗಿದೆ.

## ಕಲಿಕಾ ಗುರಿಗಳು

- ಭಾಷಾ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಕಥೆ ಕವನ ಕಾದಂಬರಿಗಳು ಮುಂತಾದ ಪ್ರಕಾರಗಳ ಕುರಿತು ತಿಳಿದುಕೊಳ್ಳುವುದು.
- ಕನ್ನಡ ನಾಡು ನುಡಿ ಸಂಸ್ಕೃತಿಯ ಬಗ್ಗೆ ಅಭಿಮಾನ ಹೊಂದಿ, ಅದನ್ನು ಉಳಿಸಿ ಬೆಳೆಸಲು ಪ್ರಯತ್ನಿಸುವುದು.
- ವಿವಿಧ ಸಾಹಿತ್ಯ ಪ್ರಕಾರಗಳ ಓದುವಿಕೆಯ ಮೂಲಕ ಜೀವನ ಮೌಲ್ಯಗಳನ್ನು ಬೆಳೆಸುವುದು.
- ಕಥೆ ಕವಿತೆಗಳನ್ನು ಸೂಕ್ತವಾದ ಭಾವಾಭಿವ್ಯಕ್ತಿಯೊಂದಿಗೆ ಮಂಡಿಸುವ ಕೌಶಲ ಹೊಂದುವುದು.
- ಕನ್ನಡ ನಾಡು ನುಡಿಯ ಹಿರಿಮೆ ಸೊಬಗು, ಸೌಂದರ್ಯವನ್ನು ತಿಳಿದುಕೊಂಡು ಕಥೆ ಕವಿತೆ ಲೇಖನ ಮೊದಲಾದ ಭಾಷಾ ವ್ಯವಹಾರ ರೂಪಗಳ ಮೂಲಕ ಸ್ವಂತ ಅಭಿಪ್ರಾಯದೊಂದಿಗೆ ವ್ಯಕ್ತಪಡಿಸುವುದು.

# ಯೂನಿಟ್ ಗ್ರಿಡ್ - ಘಟಕ 2. ನಾಡು-ನುಡಿ

**ಆಶಯ: ಭಾಷೆ-ಸಾಹಿತ್ಯ** **ಸಮಯ:**

| ಉಪ ಆಶಯ | ತಿಳುವಳಿಕೆ | ಸಾಹಿತ್ಯ ಪ್ರಕಾರ | ಭಾಷಾ ಸಾಮರ್ಥ್ಯ | ಮೌಲ್ಯ/ಮನೋಭಾವ | ಭಾಷಾ ಸತ್ಯಾಂಶ | ಭಾಷಾ ವ್ಯವಹಾರ ರೂಪ | ಕಲಿಕೋಪಕರಣ | ಮೌಲ್ಯಮಾಪನ |
|---|---|---|---|---|---|---|---|---|
| ಭಾಷೆ ಮತ್ತು ಸೃಜನಶೀಲತೆ<br><br>ಭಾಷಾ ವೈವಿಧ್ಯತೆ<br><br>ವೈಜ್ಞಾನಿಕ ಸಾಹಿತ್ಯ | ಕನ್ನಡ ಒಂದು ಶಾಸ್ತ್ರೀಯ ಭಾಷೆಯಾಗಿದೆ.<br><br>ಕನ್ನಡ ಭಾಷೆಯು ವಿವಿಧ ಸಾಹಿತ್ಯ ಪ್ರಕಾರಗಳಿಂದ ಸಮೃದ್ಧವಾಗಿದೆ.<br><br>ಕನ್ನಡ ಭಾಷೆಯು ತಂತ್ರಜ್ಞಾನ ಸ್ನೇಹಿಯಾಗಿದೆ.<br><br>ಕನ್ನಡ ಭಾಷೆಯ ಸಮೃದ್ಧಿಗೆ ಜನಸಾಮಾನ್ಯರಿಂದ ತೊಡಗಿ ವಿದ್ವಾಂಸರವರೆಗೆ ಕೊಡುಗೆಗಳು ಲಭಿಸಿವೆ. | ಕವನ<br><br>ಕತೆ<br><br>ಕಾದಂಬರಿಯ ಆಯ್ದ ಭಾಗ | ಕವನವನ್ನು ಓದಿ ಅರ್ಥೈಸುವುದು/ಆಸ್ವಾದಿಸುವುದು.<br><br>ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದ ವಿವಿಧ ಸೃಜನಶೀಲ ಬರವಣಿಗೆಯಲ್ಲಿ ತೊಡಗುವುದು.<br><br>ಕನ್ನಡ ಭಾಷೆಯಲ್ಲಿ ವಿಪುಲವಾಗಿರುವ ಸಾಹಿತ್ಯ ಪ್ರಕಾರಗಳ ಅರಿವು ಹೊಂದುವುದು. | ಕನ್ನಡ ಭಾಷೆ ಮತ್ತು ಸಾಹಿತ್ಯದಲ್ಲಿ ಅಭಿಮಾನ ಬೆಳೆಸುವುದು.<br>ಭಾಷೆಯ ವಿವಿಧ ಸಾಹಿತ್ಯ ಪ್ರಕಾರಗಳನ್ನು ತಿಳಿಯುವ ಮನೋಭಾವ ಬೆಳೆಸಿಕೊಳ್ಳುವುದು.<br>ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ಕೊಡುಗೆ ನೀಡಿದವರನ್ನು ಗೌರವಿಸುವ ಮನೋಭಾವವನ್ನು ಬೆಳೆಸಿಕೊಳ್ಳುವುದು.<br>ಕನ್ನಡ ಭಾಷೆಯನ್ನು ಮೆಚ್ಚಿಕೊಂಡು ದೈನಂದಿನ ವ್ಯವಹಾರದಲ್ಲಿ ಸಂವಹನ ಮಾಧ್ಯಮವಾಗಿ ಬಳಸಿಕೊಳ್ಳುವ ಮನೋಭಾವವನ್ನು ಬೆಳೆಸಿಕೊಳ್ಳುವುದು.<br>ಕನ್ನಡ ಭಾಷೆ ಪ್ರಾದೇಶೀಕ ವೈವಿಧ್ಯತೆಯನ್ನು ತಿಳಿದುಕೊಳ್ಳುವ ಮನೋಭಾವವನ್ನು ಬೆಳೆಸಿಕೊಳ್ಳುವುದು. | ಶಬ್ದಕೋಶ<br><br>ಪ್ರಾಸ ಪದಗಳು<br><br>ಪದ ವಿಂಗಡಣೆ<br><br>ಸಮಾನಾರ್ಥಕ ಪದ<br><br>ಅನ್ಯದೇಶೀಯ ಪದಗಳು<br><br>ಶಿಷ್ಟರೂಪ<br><br>ಸಂಯುಕ್ತ-ಸರಳ ವಾಕ್ಯ<br><br>ಲೇಖನ ಚಿಹ್ನೆಗಳು | ಹಾಡುವುದು<br>ವರ್ಣನೆ<br>ಟಿಪ್ಪಣಿ<br>ಪ್ರಬಂಧ<br>ಸ್ವಾರಸ್ಯ<br>ಓದುವುದು<br>ಸಂಭಾಷಣೆ<br>ಪಾತ್ರ ಚಿತ್ರಣ<br>ಊಹಿಸಿ ಬರೆಯುವುದು<br>ಓದುಗರ ಓಲೆ<br>ಮನವಿ ಪತ್ರ<br>ಭಾಷಣ | ಶಬ್ದಕೋಶ<br>ಕರಿಹಲಗೆ<br>ಚಾರ್ಟುಗಳು<br><br>**ಐ.ಸಿ.ಟಿ ಸಾಧ್ಯತೆಗಳು:**<br>ಕನ್ನಡ ನಾಡು-ನುಡಿಗೆ ಸಂಬಂಧಿಸಿದ ಗೀತೆಗಳನ್ನು ಕೇಳಿಸುವುದು.<br><br>ಪಾಠಕ್ಕೆ ಸಂಬಂಧಿಸಿದ ಚಿತ್ರ/ವೀಡಿಯೋ ತುಣುಕುಗಳ ಪ್ರದರ್ಶನ | ರಾಗ, ತಾಳ, ಲಯಬದ್ಧವಾಗಿ ಹಾಡುವುದನ್ನು ಮತ್ತು ಗದ್ಯದ ಓದುವಿಕೆಯನ್ನು ಪರಸ್ಪರ ಮೌಲ್ಯಮಾಪನ ಮಾಡುವುದು.<br>ಕತೆಯಲ್ಲಿ ಬರುವ ಪಾತ್ರಗಳ ಗುಣ ವಿಶೇಷತೆಗಳನ್ನು ಅಭಿವ್ಯಕ್ತಗೊಳಿಸುವ ರೀತಿಯನ್ನು, ಶೈಲಿಯನ್ನು ಮೌಲ್ಯಮಾಪನ ಮಾಡುವುದು.<br>ಇಂದಿನ ಸಮಾಜದಲ್ಲಿ ಕೈಗಾರೀಕರಣದ ಅಪಾಯವನ್ನು ಮನಗಂಡು ಸಮಾಜದಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಸಿದ್ಧಗೊಳಿಸಿದ ಓದುಗರ ಓಲೆ, ಮನವಿ ಪತ್ರ ಇತ್ಯಾದಿಗಳ ಸ್ವರೂಪ, ಬಳಸಿದ ಭಾಷಾ ಶೈಲಿಗಳನ್ನು ಮೌಲ್ಯಮಾಪನಕ್ಕೆ ಒಳಪಡಿಸುವುದು. |

## ಚಟುವಟಿಕೆಗಳು

ಮಕ್ಕಳಿಗೆ ಹಾಡು ಕೇಳುವುದೆಂದರೆ ಇಷ್ಟ. ತರಗತಿಯಲ್ಲಿ ಅಧ್ಯಾಪಕರು ದೃಶ್ಯ -ಶ್ರವ್ಯ ಮಾಧ್ಯಮದ ಮೂಲಕ ಹಾಡನ್ನು ಕೇಳಿಸುವುದು .ಮಂಜೇಶ್ವರ ಗೋವಿಂದ ಪೈ ಅವರ ಚಿತ್ರವನ್ನು ತೋರಿಸುವುದು. ಕವಿಗಳ ಕುರಿತಾದ ಕೆಲವು ಸರಳ ಪ್ರಶ್ನೆಗಳನ್ನು ಕೇಳುವುದು.

ಈ ಕವಿಯ ಹೆಸರೇನು?

ಇವರ ಊರು ಯಾವುದು?

ಮಂಜೇಶ್ವರ ಗೋವಿಂದ ಪೈಗಳ ವಿಶೇಷತೆ ಏನು?

- ಪ್ರಥಮ ರಾಷ್ಟ್ರಕವಿ.
- ಪ್ರಾಸ ಬಿಟ್ಟು ಕವನ ಬರೆದ ಮೊದಲ ಕವಿ.
- ಹಲವು ಭಾಷೆಗಳನ್ನು ಬಲ್ಲವರು.

ವಿದ್ಯಾರ್ಥಿಗಳನ್ನು ಗುಂಪುಗಳನ್ನಾಗಿ ಮಾಡುವುದು. ಅವರಿಗೆ ಪದ್ಯವನ್ನು ಓದಿ ರಾಗಸಂಯೋಜನೆ ಮಾಡಲು ಅವಕಾಶ ನೀಡುವುದು. ಉತ್ತಮವಾಗಿ ಹಾಡಿದ ಗುಂಪನ್ನು ಅಭಿನಂದಿಸುವುದು. ಬಳಿಕ ಮಕ್ಕಳ ಗುಂಪುಗಳಲ್ಲಿ ಪದ್ಯದಲ್ಲಿ ಬಂದಿರುವ ಕಠಿಣ ಪದಗಳ ಅರ್ಥವನ್ನು ಪದಕೋಶದ ಸಹಾಯದಿಂದ ಕಂಡುಕೊಳ್ಳಲು ಹೇಳುವುದು. ಪದ್ಯದ ಆಶಯವನ್ನು ಅಧ್ಯಾಪಕರು ತಿಳಿಸುವುದು.

## ಆಶಯ

ಇದು ಕರ್ನಾಟಕ ಏಕೀಕರಣದ ಪೂರ್ವದಲ್ಲಿ ಕನ್ನಡ ತಾಯಿಯನ್ನು ಸ್ತುತಿಸಿ ಬರೆದ ಕವನ. ತಾಯಿ ತನ್ನ ಮುಖವನ್ನು ತೋರುವ ಮೂಲಕ ಕನ್ನಡದ ಮಕ್ಕಳನ್ನು ಒಂದಾಗಿಸಬೇಕು ಎನ್ನುವುದು ಪದ್ಯದ ಮುಖ್ಯ ಆಶಯ. ತಾಯಿಯ ಮುಖವನ್ನು ಕಂಡಾಗ ಮಕ್ಕಳಿಗೆ ಸಂತೋಷ, ಆನಂದ, ಉಲ್ಲಾಸ ಉಂಟಾಗುವಂತೆ ತಾಯಿ ಭುವನೇಶ್ವರಿಯ ಮುಖವನ್ನು ಕಂಡಾಗ ಕನ್ನಡಿಗರಲ್ಲಿ ನವ ಹುರುಪು ಮೂಡುತ್ತದೆ. ಆದ್ದರಿಂದ ನಮ್ಮ ಜನ್ಮದಾತೆಯಾದ ಕನ್ನಡ ಮಾತೆಯು ತನ್ನ ಮುಖವನ್ನು ತೋರಿಸಿ ನಮ್ಮನ್ನು ಹರಸುವಂತೆ ಕವಿ ಬೇಡಿಕೊಳ್ಳುತ್ತಾರೆ. ಕನ್ನಡ ನಾಡಿನಲ್ಲಿ ಎಲ್ಲಾ ಸಂಪತ್ತು ಇದೆ. ತಾಯಿಯ ಮುಖವನ್ನು ಕಂಡಾಗ ಅದೆಲ್ಲವೂ ಗೋಚರವಾಗುತ್ತದೆ. ಕನ್ನಡವೇ ನಮ್ಮ ಉಸಿರಾಗಬೇಕು. ಕನ್ನಡ ನಾಡು ನುಡಿಯ ಶ್ರೇಷ್ಠತೆ, ಭವ್ಯ ಪರಂಪರೆ, ಪ್ರಾಕೃತಿಕ, ಸಾಹಿತ್ಯ, ವಾಸ್ತುಶಿಲ್ಪಗಳ ಭವ್ಯತೆಯಿಂದ ಜಗತ್ತಿನೆಲ್ಲೆಡೆ ಹರಡಬೇಕೆಂಬುದು ಕವಿಯ ಆಶಯವಾಗಿದೆ.

ನಮ್ಮ ಕನ್ನಡ ತಾಯಿ ನಾವು ಮಾಡುವ ತಪ್ಪುಗಳನ್ನು ಕ್ಷಮಿಸಿ ನಮ್ಮನ್ನು ಮಕ್ಕಳಂತೆ ಕಾಪಾಡುತ್ತಾಳೆ. ನಮ್ಮ ತನು, ಮನ ಎಲ್ಲವೂ ಕನ್ನಡ. ಆದ್ದರಿಂದ ಕನ್ನಡ ತಾಯಿಯನ್ನು ಮರೆಯಲು ಸಾಧ್ಯವಿಲ್ಲ.

ಕನ್ನಡ ನಾಡಿನಲ್ಲಿ ವಿಧವಿಧವಾದ ಹಣ್ಣು ಕಾಯಿಗಳನ್ನು ನೀಡುವ ಮರಗಿಡಗಳಿವೆ. ತರತರವಾದ ಹೂವು ಪತ್ರೆಗಳನ್ನು ನೀಡುವ ಲತೆಗಳಿವೆ. ತೆನೆಯ ಸಾರದಿಂದ ಕೂಡಿದ ಗಾಳಿ ಬೀಸುತ್ತದೆ. ಪಕ್ಷಿ ಪ್ರಾಣಿ ಹಾವುಗಳ ಸಮೂಹವಿದೆ. ನದಿ ನಗರ ಪರ್ವತಗಳ ಸಾಲು ಇದೆ. ಇಲ್ಲಿರುವ ಸೌಂದರ್ಯವನ್ನು ಬೇರೆ ಎಲ್ಲೂ ಕಾಣಲು ಸಾಧ್ಯವಿಲ್ಲ. ಜೇನು ಸುರಿವ, ಹಾಲು ಹರಿವ, ಸ್ವರ್ಗಭೂಮಿ ಕನ್ನಡ ನಾಡು ಎಂದು ಕನ್ನಡ ನಾಡಿನ ಪ್ರಕೃತಿಯ ವೈಭವವನ್ನು ವರ್ಣಿಸಿದ್ದಾರೆ.

ಕನ್ನಡದ ಆದಿಕವಿ ಪಂಪ, ಕವಿ ಚಕ್ರವರ್ತಿ ರನ್ನ, ಜನ್ನ, ಷಡಕ್ಷರಿ ಮುದ್ದಣ ಮೊದಲಾದವರು ಮಹಾ ಕಾವ್ಯಗಳನ್ನು ರಚಿಸಿದ್ದಾರೆ. ದಾಸ ಶ್ರೇಷ್ಠರಾದ ಪುರಂದರದಾಸರು ಕನಕದಾಸರು ಮೊದಲಾದವರು ಭಕ್ತಿ ಪ್ರಧಾನವಾದ ಕೀರ್ತನೆಗಳನ್ನು ರಚಿಸಿದ ಸಾಹಿತ್ಯವನ್ನು ಬೆಳೆಸಿದವರು. ವಿದ್ಯಾರಣ್ಯ ಗುರುಗಳು ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗೆ ಪೂರಕ ಶಕ್ತಿಯಾಗಿ ನಿಂತರು. ಇದು ಕನ್ನಡ ನಾಡಿನ ಕವಿ ಶ್ರೇಷ್ಠರ ಹಿರಿಮೆಯಾಗಿದೆ. ಶಿಲ್ಪ ಕಲೆಗಳ ಬೀಡಾದ ಬೇಲೂರು ಹಳೆಬೀಡು ಬಹಳ ಸುಂದರವಾಗಿದೆ. ಶ್ರವಣಬೆಳಗೊಳ ಹಾಗೂ ಕಾರ್ಕಳದಲ್ಲಿ ನಿಡಿದಾಗಿ ಎದ್ದು ನಿಂತಿರುವ ಗೊಮ್ಮಟ ಮೂರ್ತಿಯು ಅದೆಷ್ಟೋ ಸುಂದರವಾಗಿದೆ. ಇಲ್ಲಿರುವ ಕಲ್ಲುಗಳೆಲ್ಲವೂ ಶಿಲ್ಪ ಕಲೆಯನ್ನು ಪ್ರಕಟಿಸುತ್ತದೆ. ಹಾಗೂ ಅವುಗಳ ಹಿಂದಿನ ಕಥೆಯೆಲ್ಲ ಪ್ರೀತಿಯ ಮಾತುಗಳಾಗಿದ್ದು ನಮ್ಮ ಕಲೆಯ ಬಗ್ಗೆ ತಿಳಿಯುವ ಹಂಬಲವೆಂಬ ಬಾಯಾರಿಕೆಯನ್ನು ನೀಗಿಸುತ್ತದೆ. ಈ ಪದ್ಯದಲ್ಲಿ ಹಿಂದಿನ ಎಲ್ಲಾ ಕಥೆಗಳನ್ನು ಕವಿಗಳು ಹೊಸತನದಲ್ಲಿ ಪ್ರಕಟಿಸುತ್ತಾರೆ.

ಸಂಕೋಚ ಸ್ವಭಾವದ ಕಸ್ತೂರಿ ಅಂತರಂಗದ ಕಂಪನ್ನು ಅರಿಯದೆ ಹೊರಗೆ ಹುಡುಕುವಂತೆ ಕನ್ನಡಿಗರು ತಮ್ಮ ನುಡಿಯ ಸೊಬಗನ್ನು ಅಂದ ಚಂದವನ್ನು ಅರಿಯದೆ ಅನ್ಯ ಭಾಷೆಗೆ ಮನಸೋಲುತ್ತಿರುವರು. ಕನ್ನಡವು ಸರಳವೂ ಸುಲಭವೂ ಆಗಿದೆ. ಇದನ್ನು ಹೆಚ್ಚು ಹೆಚ್ಚು ಸಂಶೋಧನೆಗಳಿಂದ ಶ್ರೀಮಂತ ಭಾಷೆಯಾಗಿ ಮಾಡಬೇಕು. ಈ ಮೂಲಕ ಕನ್ನಡದ ಹೆಸರನ್ನು ಜಗದಗಲ ಹಬ್ಬಿಸಬೇಕು ಎಂದು ಕವಿ ಹೇಳಿದ್ದಾರೆ. ಕನ್ನಡಿಗರ ಹೃದಯ ಶ್ರೀಮಂತಿಕೆ, ಹೆಚ್ಚುವಂತೆ ನಾವು ಎಲ್ಲರೂ ಒಂದೇ ಎನ್ನುವ ಭಾವನೆಯನ್ನು ಮೂಡಿಸುವಂತೆ,ಕನ್ನಡ ಭಾಷೆಗೆ ಹೊಸ ಶಕ್ತಿ ತುಂಬಿಸುವಂತೆ, ಕನ್ನಡದ ಹೆಸರನ್ನು ಜಗದಲ್ಲಿ ಹಬ್ಬಿಸುವ ಸಾಮರ್ಥ್ಯವನ್ನು ಕೊಡು ಎಂದು ಕವಿಗಳು ಹೇಳುತ್ತಾರೆ.

## ಉತ್ತರಿಸಿರಿ

ಪದ್ಯದ ಆಶಯವನ್ನು ಮಕ್ಕಳು ತಿಳಿದುಕೊಂಡಿದ್ದಾರೆ ಎಂದು ಖಾತರಿ ಪಡಿಸುವುದೇ ಈ ಚಟುವಟಿಕೆಯ ಉದ್ದೇಶ. ಆಶಯಗ್ರಹಣಕ್ಕಾಗಿ ನೀಡಿದ ಪ್ರಶ್ನೆಗಳಿಗೆ ವಿದ್ಯಾರ್ಥಿಗಳು ವೈಯಕ್ತಿಕವಾಗಿ ಉತ್ತರಿಸಲಿ.

## ವರ್ಣನೆ

ವರ್ಣನಾತ್ಮಕ ಬರವಣಿಗೆಯನ್ನು ಹೇಗೆ ಬರೆಯಬೇಕು ಎಂಬುದರ ತರಬೇತು ನೀಡುವುದು ಈ ಚಟುವಟಿಕೆಯ ಉದ್ದೇಶ. ಯಾವುದೇ ವಿಚಾರವನ್ನು ಆಸ್ವಾದಿಸಬೇಕಿದ್ದರೆ ಅದು ಕಣ್ಣಿಗೆ ಕಟ್ಟುವಂತೆ ಇರಬೇಕು.

**ವರ್ಣನೆ ಹೇಗಿರಬೇಕು ?**

ಸೂಚಕಗಳನ್ನು ನಿರ್ಧರಿಸುವುದು.

- ಆಶಯಕ್ಕೆಹೊಂದಿಕೊಂಡು ಬರೆಯಲಾಗಿದೆ.
- ವಿಶೇಷಣ, ಹೋಲಿಕೆ, ಉಪಮೆ, ಸಂಕೇತ, ಪ್ರತಿಮೆಗಳನ್ನು ಬಳಸಲಾಗಿದೆ.
- ವಾಕ್ಯ ರಚನೆಯಲ್ಲಿ ಸ್ವಂತಿಕೆ ಇದೆ.

ಮಕ್ಕಳು ಗುಂಪಿನಲ್ಲಿ ಕುಳಿತುಕೊಂಡು ತಮ್ಮ ವರ್ಣನೆಯನ್ನು ಪ್ರತಿಯೊಬ್ಬರೂ ಮಂಡಿಸಲಿ. ಸೂಚಕಗಳ ಆಧಾರದಲ್ಲಿ ಯಾರ ವರ್ಣನೆ ಉತ್ತಮವಾಗಿದೆ ಎಂದು ಕಂಡುಕೊಳ್ಳಲಿ. ಗುಂಪಿನಿಂದ ಉತ್ತಮ ವರ್ಣನೆಯ ಮಂಡನೆ. ಅತ್ಯುತ್ತಮ ವರ್ಣನೆಯನ್ನು ಆರಿಸಲು ಮಕ್ಕಳಿಗೆ ಹೇಳುವುದು. ಬಳಿಕ ನೀವು ತಯಾರಿಸಿದ ವರ್ಣನೆಯನ್ನು ತರಗತಿಯಲ್ಲಿ ಮಂಡಿಸುತ್ತೀರಲ್ಲವೇ?

## ವರ್ಣನೆ ಹೀಗೂ ಇರಬಹುದಲ್ಲವೇ?

ಪ್ರಕೃತಿ ನಮಗೆ ಅಪಾರವಾದ ಸಂತೋಷ ಮತ್ತು ತೃಪ್ತಿಯನ್ನು ನೀಡುತ್ತದೆ ಪ್ರಕೃತಿಯು ಉತ್ಸಾಹಿಯಾಗಿ ಶಾಂತವಾದ ಗಾಳಿ, ಹರಿವತೊರೆಗಳು ಮತ್ತು ನೃತ್ಯ ಮಾಡುವ ಹೂವುಗಳಲ್ಲಿ ಸಂತೋಷವನ್ನು ಕಾಣಬಹುದು. ನಮ್ಮ ನಾಡಿನಲ್ಲಿ ಪ್ರಕೃತಿ ರಮಣೀಯವಾದ ಹಲವಾರು ತಾಣಗಳಿವೆ. ಅದರಲ್ಲಿ ಜೋಗ ಜಲಪಾತ ಒಂದು. ಭಾರತದ ಎರಡನೆಯ ಅತಿ ಎತ್ತರದ ಜಲಪಾತ ಇದಾಗಿದೆ. ಇದು ಕರ್ನಾಟಕ ರಾಜ್ಯದ ಉತ್ತರ ಕನ್ನಡ ಜಿಲ್ಲೆಯ ಸಿದ್ಧಾಪುರ ತಾಲೂಕಿನ ದಟ್ಟವಾದ ಕಾಡು ಹಾಗೂ ಗುಡ್ಡಗಳಿಂದ ಆವೃತವಾದ ಸ್ಥಳದಲ್ಲಿದೆ. ಜೋಗ ಜಲಪಾತವು ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನಲ್ಲಿದೆ. ಇದು ಒಂದು ಪ್ರಮುಖ ಪ್ರವಾಸಿ ತಾಣ. ಶರಾವತಿ ನದಿಯು ನಾಲ್ಕು ಕವಲುಗಳಾಗಿ ಸುಮಾರು 292 ಮೀಟರ್ ಎತ್ತರದಿಂದ ಭೋರ್ಗರೆಯುತ್ತಾ ಧುಮುಕುವ ತಾಣವೇ ಜೋಗ ಜಲಪಾತ. ವೈಭವದಿಂದ ಅವ್ಯಾಹತವಾಗಿ ಧುಮುಕುವ ರಾಜ, ಜೋರಾಗಿ ಅರ್ಭಟಿಸುತ್ತಾ ಹಲವಾರು ಬಾರಿ ಚಿಮ್ಮುತ್ತಾ ಧುಮುಕುವ ರೋರರ್, ಬಳುಕುತ್ತಾ ಜಾರುವ ರಾಣಿ (ಲೇಡಿ) ಮತ್ತು ರಭಸದಿಂದ ಹಲವಾರು ಬಂಡೆಗಳನ್ನು ಚಿಮ್ಮುತ್ತಾ ನುಗ್ಗುವ ರಾಕೆಟ್. ಈ ನಾಲ್ಕು ಜಲ ಭಾಗಗಳಾಗಿವೆ. ಮಳೆಗಾಲದಲ್ಲಿ ಅತ್ಯಂತ ರಮಣೀಯ ರೂಪ ತೊಡುವ ಈ ಜಲಪಾತ ಬಿಳಿ ಮೋಡಗಳ ಹಿಂದೆ ಕಣ್ಣ ಮುಚ್ಚಾಲೆ ಆಡುತ್ತಾ ನೋಡುಗರ ಕಣ್ಮನ ಸೆಳೆಯುತ್ತದೆ.

## ಟಿಪ್ಪಣಿ

ಮಕ್ಕಳು ನಿರ್ದಿಷ್ಟ ವಿಚಾರವನ್ನು ವಸ್ತುನಿಷ್ಠವಾಗಿ ವಿಶ್ಲೇಷಿಸಿ ಸೂಕ್ತವಾದ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಮರ್ಥರಾಗಬೇಕು. ಮಕ್ಕಳ ಅವರಿಗಿಷ್ಟವಾದ ಸಾಲನ್ನು ಆಯ್ಕೆ ಮಾಡಲಿ. ಆ ಸಾಲು ಅವರಿಗೆ ಯಾಕೆ ಇಷ್ಟವಾಯಿತು ಎಂದು ಬರೆಯಲಿ. "ತನ್ನ ಮರೆಯ ಕಂಪನರಿಯದದನೆ ಹೊರಗೆ ಹುಡುಕುವ ಮೃಗನ ಸೇಡು ನಮ್ಮ ಪಾಡು ಪರರ ನುಡಿಗೆ ಮಿಡುಕುವ". ಇಲ್ಲಿ ಕನ್ನಡಿಗರ ಸ್ಥಿತಿಯನ್ನು ಕಸ್ತೂರಿ ಮೃಗಕ್ಕೆ ಹೋಲಿಸಿದ್ದಾರೆ. ತನ್ನ ಅಂತರಂಗದ ಕಂಪನ್ನು ಅರಿಯದೆ, ಕನ್ನಡಿಗರು ತಮ್ಮ ತಮ್ಮ ಭಾಷೆಯ ಸೊಗಸನ್ನು ತಿಳಿಯದೆ ಪರಭಾಷಾ ವ್ಯಾಮೋಹಕ್ಕೆ ಬಲಿಯಾಗಿದ್ದಾರೆ ಎಂದು ಹೇಳುವ ಸಾಲುಗಳು ತುಂಬಾ ಇಷ್ಟವಾಯಿತು. ಭಾಷಾ ಪ್ರೇಮವನ್ನು ಬೆಳೆಸ ಬೇಕೆಂಬ ಸಂದೇಶ ಇಲ್ಲಿದೆ.

## ಪ್ರಬಂಧ ರಚಿಸಿರಿ

ಭಾಷಾ ಕಲಿಕೆಯಲ್ಲಿ ಪ್ರಬಂಧ ರಚನೆಗೆ ಪ್ರಧಾನ ಪಾತ್ರವಿದೆ. ಮಕ್ಕಳಿಗೆ ಸರಳ ಪ್ರಬಂಧವನ್ನು ಬರೆಯಲು ತರಬೇತಿ ನೀಡುವ ಅಗತ್ಯವಿದೆ. ಪ್ರಬಂಧ ರಚನೆಗೆ ಪೂರಕವಾದ ಮಾಹಿತಿಗಳನ್ನು ವಾಚನಾಲಯಗಳಿಂದ ಪತ್ರಿಕೆ, ದೃಶ್ಯ- ಶ್ರವ್ಯ ಮಾಧ್ಯಮಗಳಿಂದ ಸಂಗ್ರಹಿಸಲು ವಿದ್ಯಾರ್ಥಿಗಳಿಗೆ ಅವಕಾಶ ಮಾಡಿಕೊಡಬೇಕು. ಮಾಹಿತಿಗಳನ್ನು ಕಲೆಹಾಕಿ ವ್ಯವಸ್ಥಿತವಾದ ಪ್ರಬಂಧ ರಚನೆ ಮಾಡುವ ಕೌಶಲವು ಮಕ್ಕಳಲ್ಲಿ ಬೆಳೆಯಬೇಕು.

**ಪ್ರಬಂಧದಲ್ಲಿ ಒಳಗೊಂಡಿರಬೇಕಾದ ಅಂಶಗಳು**

- ಸೂಕ್ತವಾದ ಶೀರ್ಷಿಕೆ ಇರಬೇಕು
- ಪೀಠಿಕೆ, ವಿಷಯ ವಿಸ್ತಾರ,ಉಪಸಂಹಾರಗಳಿರಬೇಕು.
- ವಿಷಯದ ಸಮರ್ಥನೆ ಇರಬೇಕು.
- ಉಪ ಆಶಯಗಳನ್ನು ಪಾರಾಗಳಾಗಿ ಬರೆದಿರಬೇಕು.
- ಆಶಯ ಪೂರ್ಣವಾಗಿರಬೇಕು.
- ಸೃಜನಶೀಲತೆಗೆ ಹೆಚ್ಚು ಅವಕಾಶ ನೀಡಬೇಕು.
- ಗಾದೆ, ನುಡಿಗಟ್ಟನ್ನು ಸೂಕ್ತವಾಗಿ ಬಳಸಬಹುದು.

ಪ್ರಬಂಧ ಈಗೂ ಬರೆಯಬಹುದಲ್ಲವೇ?

# ನಾಡು- ನುಡಿ -ಸಂಸ್ಕೃತಿ

'ಜೈಭಾರತ ಜನನಿಯ ತನುಜಾತೆ ಜಯ ಹೇ ಕರ್ನಾಟಕ ಮಾತೆ'ಎಂದು ಕವಿ ಕುವೆಂಪು ಹೇಳಿದ್ದಾರೆ. ಭಾರತದ ಪುತ್ರಿಯಾದ ಕರುನಾಡ ನೆಲ, ಸಾಹಿತ್ಯ, ಸಂಸ್ಕೃತಿ, ಕಲೆ, ಸಂಗೀತಗಳ ತವರೂರು. 'ಕಲಿಯೋಕೆ ಕೋಟಿ ಭಾಷೆ ಇದ್ದರೂ, ಆಡೋಕೆ ಒಂದೇ ಭಾಷೆ' ಎಂಬಂತೆ ಕನ್ನಡ ನಾಡಿನಲ್ಲಿ ಕನ್ನಡವು ಎಲ್ಲಾ ಭಾಷೆಯ ಜನರನ್ನು ಒಗ್ಗೂಡಿಸಿವೆ. ಕನ್ನಡ ಭಾಷೆ ಮತ್ತು ಸಂಸ್ಕೃತಿಯು ಉತ್ಕೃಷ್ಟವಾದದ್ದು, ಶ್ರೀಮಂತವಾದದ್ದು. ವಿಫಲವಾಗಿ ದೊರಕುವ ಸಾಹಿತ್ಯ ಕೃತಿಗಳು, ಐತಿಹಾಸಿಕ ದಾಖಲೆಗಳು ಈ ಅಂಶವನ್ನು ದೃಢೀಕರಿಸುತ್ತವೆ. ಕರ್ನಾಟಕದಲ್ಲಿ ಬಳಸಲಾಗುವ ಕನ್ನಡ ಭಾಷೆಯನ್ನು ಭಾರತೀಯ ಸಂವಿಧಾನವು ದೇಶದ ಪ್ರಮುಖ ಭಾಷೆಗಳಲ್ಲಿ ಒಂದಾಗಿ ಪರಿಗಣಿಸಿದೆ. ಕನ್ನಡ ಪಂಚ ದ್ರಾವಿಡ ಭಾಷೆಗಳಲ್ಲಿ ಒಂದು. ಇದು 2000 ವರ್ಷಗಳ ಇತಿಹಾಸವನ್ನು ಹೊಂದಿದೆ. ನೆರೆಯ ರಾಜ್ಯಗಳಾದ ಆಂಧ್ರಪ್ರದೇಶ, ತಮಿಳುನಾಡು, ಕೇರಳ, ಗೋವಾ, ದಮನ್ ಹಾಗೂ ದೀವ್ ನಲ್ಲಿ ಕನ್ನಡವನ್ನು ಮಾತನಾಡುವ ಜನರಿದ್ದಾರೆ. ಕನ್ನಡದಲ್ಲಿ ಪ್ರಾದೇಶಿಕವಾಗಿ ಬೇರೆ ಬೇರೆ ಉಪಭಾಷೆಗಳಿವೆ. ಮೈಸೂರು ಕನ್ನಡ, ಧಾರವಾಡ ಕನ್ನಡ, ಹಾಗೂ ಮಂಗಳೂರು ಕನ್ನಡಗಳ ಜನಪ್ರಿಯವಾದ ಭಾಷಾ ಶೈಲಿಗಳನ್ನು ಕ್ರಮವಾಗಿ 3 ಸಾಂಸ್ಕೃತಿಕ ಕೇಂದ್ರಗಳಾದ ಮೈಸೂರು, ಧಾರವಾಡ ಹಾಗೂ ಮಂಗಳೂರಿನಲ್ಲಿ ಮಾತನಾಡುತ್ತಾರೆ.

ಕ್ರಿ ಶ.450 ಕ್ಕೆ ಸೇರಿದ ಹಲ್ಮಿಡಿ ಶಾಸನದಲ್ಲಿ ಕನ್ನಡ ಲಿಪಿಯ ಪ್ರಾರಂಭಿಕ ರೂಪ ದೊರೆತಿದೆ. ಬಾದಾಮಿ ಚಾಲುಕ್ಯ ರ ಸಂಸ್ಕೃತದ ಅನೇಕ ಶಾಸನಗಳನ್ನು ಈ ಲಿಪಿಯಲ್ಲಿ ಬರೆಯಲಾಗಿದೆ. ಕದಂಬರ ಹಲ್ಮಿಡಿ ಶಿಲಾಶಾಸನ ಹಾಗೂ ಚಾಲುಕ್ಯರ ಬಾದಾಮಿ ಗುಹಾ ಶಾಸನಗಳು ಅತ್ಯಂತ ಪುರಾತನ ಕನ್ನಡ ದಾಖಲೆಗಳಾಗಿವೆ. ವಿಜಯನಗರದ ಅರಸರಿಗೆ ಸೇರಿದ ಅನೇಕ ದಾಖಲೆಗಳು ಕನ್ನಡದಲ್ಲಿದೆ. ಕರುನಾಡು, ಕಲೆ -ಸಂಸ್ಕೃತಿಗಳ ನೆಲೆವೀಡು. ಕಾವೇರಿ ಹುಟ್ಟಿದ ನಾಡು. ಕಲ್ಲಲ್ಲಿ ಕಲೆಯನ್ನು ಕಂಡ ಬೇಲೂರ ಶಿಲ್ಪದ ಬೀಡು. ಹಳೇಬೀಡು, ಬಾದಾಮಿ, ಐಹೊಳೆ, ಪಟ್ಟದಕಲ್ಲು ಮುಂತಾದ ಕಡೆಗಳಲ್ಲಿ ಶಿಲ್ಪಕಲೆಯು ಕಾವ್ಯವಾಗಿ ಮೈದಳೆದಿದೆ. ಪಂಪ, ರನ್ನ, ಜನ್ನ ರ ಕಾವ್ಯದ ಸೊಗಸು ನವ ನೂತನವಾಗಿ ಉಳಿದಿದೆ. ಜಾನಪದ ನೃತ್ಯ, ಹಾಡು, ನಾಟಕ, ಕಲೆ ಮೊದಲಾದ ಆಚರಣೆಗಳು ಕನ್ನಡ ಸಂಸ್ಕೃತಿಯ ಹಿರಿಮೆಗಳಾಗಿವೆ. ಆದರೆ ಇಂದು ಪರಕೀಯ ಭಾಷೆಯ ವ್ಯಾಮೋಹಕ್ಕೆ ಸಿಲುಕಿ ಕನ್ನಡ ಮರೆಯಾಗುತ್ತಿರುವುದು ಬೇಸರದ ಸಂಗತಿ. ಭಾಷೆ ಉಳಿದರೆ ಮಾತ್ರ ಸಂಸ್ಕೃತಿ ಉಳಿಯಲು ಸಾಧ್ಯ. ಆದ್ದರಿಂದ ನಮ್ಮ ಭಾಷೆಯನ್ನು ಉಳಿಸಿ, ಬೆಳೆಸುವ ಮೂಲಕ ಸಂಸ್ಕೃತಿಯನ್ನು ಆಚಾರ ವಿಚಾರಗಳನ್ನು ಗೌರವಿಸಬೇಕಾದದು ಪ್ರತಿಯೊಬ್ಬ ಕನ್ನಡಿಗನ ಆದ್ಯ ಕರ್ತವ್ಯವಾಗಿದೆ.

## ಸ್ವಾರಸ್ಯ

ಮಕ್ಕಳು ವೈಯಕ್ತಿಕವಾಗಿ ಪದ್ಯದ ಸ್ವಾರಸ್ಯ ಬರೆಯಲಿ. ಅನಂತರ ಗುಂಪಿನಲ್ಲಿ ಕುಳಿತು ಚರ್ಚಿಸಿ ಉತ್ತಮಪಡಿಸಲಿ. ಸ್ವಾರಸ್ಯ ಬರೆಯುವಾಗ ಆಶಯದ ಸ್ಪಷ್ಟತೆ ಇರಬೇಕು. ಮತ್ತು ಕವಿತೆಯ ಬಗ್ಗೆ ಸ್ವಂತ ಅಭಿಪ್ರಾಯವನ್ನು ಸೇರಿಸಿಕೊಳ್ಳಬೇಕು.

ಮಂಜೇಶ್ವರ ಗೋವಿಂದ ಪೈಗಳು ಬರೆದ ' ಕನ್ನಡಿಗರ ತಾಯಿ' ಕವನ ವು ಪ್ರಾಸ ಪದಗಳಿಂದ ಕೂಡಿದ್ದು ಅದರಲ್ಲಿ ಗೇಯತೆ ಇದೆ. ಈ ಕವನದ ಸಾಲುಗಳಲ್ಲಿ ಕನ್ನಡ ಬಾಷಿಗರನ್ನು ಕಸ್ತೂರಿ ಮೃಗಕ್ಕೆ ಹೋಲಿಸಲಾಗಿದೆ. ತನ್ನ ಅಂತರಂಗದ ಕಂಪನ್ನು ಅರಿಯದೆ ಊರೆಲ್ಲಾ ಸುತ್ತಾಡುವ ಕಸ್ತೂರಿ ಮೃಗದಂತೆ ಕನ್ನಡಿಗರು ತಮ್ಮ ನುಡಿಯ ಸೊಬಗನ್ನು ಅಂದ ಚಂದವನ್ನು ಅರಿಯದೆ ಅನ್ಯ ಭಾಷೆಗೆ ಮನಸೋಲುತ್ತಿದ್ದಾರೆ ಎಂದು ವಿಷಾದ ವ್ಯಕ್ತಪಡಿಸಿದ್ದಾರೆ.

## ಪ್ರಾಸ ಪದ

ಪ್ರಾಸ ಪದಗಳನ್ನು ಗುರುತಿಸುವುದೆ ಅದು ಕವಿತೆಯ ರಸಾಸ್ವಾದನೆ ಮಾಡಿದಂತೆ. ಪ್ರಾಸಗಳಿಂದ ಕವಿತೆಯ ಸೊಬಗು ಹೆಚ್ಚುತ್ತದೆ. ಇದಕ್ಕಾಗಿ ಈ ಚಟುವಟಿಕೆಯನ್ನು ಇಲ್ಲಿ ನೀಡಲಾಗಿದೆ. ಮಕ್ಕಳು ಪದ್ಯದಲ್ಲಿ ಬರುವ ಪ್ರಾಸ ಪದ ಗಳನ್ನು ಗುರುತಿಸಿ ಪುಸ್ತಕದಲ್ಲಿ ಬರೆಯಲಿ.

ಮಾತೆಯೆ - ಜನ್ಮದಾತೆ ಯೆ

ತಾಳ್ವೆ- ಬಾಳ್ವೆ

ಮರಂಗಳೋ - ತರತರಂಗಳೋ

ಕುಂಡ ಕುಂದವರ್ಯರ - ಮುಖ್ಯಾಮತಾಚಾರ್ಯರ

ಸುಂದರಂ - ಬಂಧುರಂ

## ಪದವಿಂಗಡಣೆ

ಭಾಷೆಗೆ ಒಂದು ಶಾಸ್ತ್ರೀಯ ಚೌಕಟ್ಟು ಇದೆ ಎಂಬುದನ್ನು ಮಗು ತಿಳಿದುಕೊಳ್ಳಬೇಕಾಗಿದೆ. ಭಾಷಾಜ್ಞಾನ ಬೆಳೆಯುತ್ತಿರುವ ಈ ಹಂತದಲ್ಲಿ ಸಂಧಿಯಾಗಿರುವ ಪದಗಳನ್ನು ಕಂಡುಹಿಡಿದು ವಿಂಗಡಿಸಿ ಬರೆಯುವ ಸಾಮರ್ಥ್ಯವನ್ನು ಬೆಳೆಸುವುದು ಈ ಚಟುವಟಿಕೆ ಉದ್ದೇಶ.

ತಪ್ಪನು +ಎನಿತು = ತಪ್ಪನೆನಿತು

ಅಕ್ಕರೆಯಿಂದ+ಎಮ್ಮನು+ಆಳ್ವೆ = ಅಕ್ಕರೆಯಿಂದೆಮ್ಮ ನಾಳ್ವೆ

ಹಣ್ಣನು+ ಈವ  = ಹಣ್ಣನೀವ

ಕಾಯನು+ ಈವ = ಕಾಯನೀವ

ನಿಡುಕರು+ ಏನಿತೋ = ನಿಡುಕರೆನಿತೋ

ಹಿಂಗತೆಯ+ ಇನಿವಾಲ + ಸೊಲ್ಲ = ಹಿಂಗತೆಯಿನಿವಾಲ ಸೊಲ್ಲ

ಹಾಲನು+ಉಕ್ಕಿಸು = ಹಾಲನುಕ್ಕಿಸು

ಕಂಪನು+ ಅರಿಯದೆ+ ಅದನೆ = ಕಂಪನರಿಯದದನೆ

ಮನಮನು+ ಒಂದೆ = ಮನಮನೊಂದೆ

ಹೊಸತು+ಉಸಿರಿಂ = ಹೊಸತುಸಿರಿಂ

ಸುಗಂಧದ+ಒಸಗೆಯಿಂದ = ಸುಗಂಧದೊಸಗೆಯಿಂದ

## ಸಮಾನಾರ್ಥಕ ಪದ

ಈ ಪದ್ಯದಲ್ಲಿ ಹಲವು ಹೊಸ ಪದಗಳಿವೆ. ಮಕ್ಕಳಿಗೆ ಈ ಪದಗಳ ಅರ್ಥ ತಿಳಿದು, ಹೊಸ ಸಂದರ್ಭದಲ್ಲಿ ಬಳಸುವ ಸಾಮರ್ಥ್ಯ ಉಂಟಾಗಬೇಕು. ಪದಗಳನ್ನು ಕೇವಲ ಓದಿದರೆ ಸಾಲದು. ಇದಕ್ಕಾಗಿ ಈ ಪಾಠದ ಕೊನೆಗೆ ಇರುವ ಇಂತಹ ಚಟುವಟಿಕೆಯನ್ನು ನೀಡಬೇಕು. ಈ ಪದಗಳನ್ನು ಬಳಸಿಕೊಂಡು ವಾಕ್ಯ ರಚನೆ ಮಾಡಲು ಉತ್ತೇಜಿಸಬೇಕು.

ಆಳಿ = ಸಮೂಹ

ಹಕ್ಕಿಗಳ ಆಳಿಯು ಸಂಜೆ ಹೊತ್ತಿಗೆ ಬಾನಿನಲ್ಲಿ ಹಾರಾಡುವುದು ಕಂಡಿತು.

ಖಗ = ಪಕ್ಷಿ

ಈ ಪರಿಸರದಲ್ಲಿ ಮನುಷ್ಯನಿಗೆ ಬದುಕುವ ಹಕ್ಕಿರುವಂತೆಯೇ ಖಗ ಮೃಗಗಳಿಗೂ ಜೀವಿಸುವ ಹಕ್ಕಿದೆ.

ಕಾರಕಳ = ಕಾರ್ಕಳ

ಕಾರಕಳದಲ್ಲಿರುವ ಗೊಮ್ಮಟೇಶ್ವರನ ವಿಗ್ರಹವು ನೋಡುಗರ ಕಣ್ಮನ ಸೆಳೆಯುತ್ತದೆ.

ತೃಷೆ = ಬಾಯಾರಿಕೆ ಬಿಸಿಲಿನಲ್ಲಿ ನಡೆದು ಬಂದು ರಾಮನಿಗೆ ತೃಷೆ ಉಂಟಾಯಿತು.

## ಸಂಚಿಕೆ ತಯಾರಿ

ಕನ್ನಡ ನಾಡು ನುಡಿಯ ಕುರಿತಾದ ಕವನಗಳು ಧಾರಾಳವಾಗಿ ಸಿಗುತ್ತವೆ. ವಿದ್ಯಾರ್ಥಿಗಳಲ್ಲಿ ಈ ಕವನಗಳನ್ನು ಸಂಗ್ರಹಿಸಿ ಒಂದು ಸಂಚಿಕೆಯನ್ನು ತಯಾರಿಸಲು ಹೇಳುವುದು. ಶಾಲಾ ಅಸೆಂಬ್ಲಿಯಲ್ಲಿ ಇದನ್ನು ಬಿಡುಗಡೆ ಮಾಡಿ ತರಗತಿ ಲೈಬ್ರರಿಯಲ್ಲಿ ಜೋಡಿಸಿಡುವುದು.

## ಪೂರಕ ಓದಿಗೆ

### ಹುಟ್ಟಿದರೆ ಕನ್ನಡ ನಾಡಲಿ ಹುಟ್ಟಬೇಕು

ಹುಟ್ಟಿದರೆ ಕನ್ನಡ ನಾಡಲಿ ಹುಟ್ಟಬೇಕು.
ಮೆಟ್ಟಿದರೆ ಕನ್ನಡ ಮಣ್ಣ ಮೆಟ್ಟಬೇಕು.
ಬದುಕಿದು ಜಟಕಾ ಬಂಡಿ ಇದು ವಿಧಿ ಯೋಡಿಸುವಾ ಬಂಡಿ
ಬದುಕಿದು ಜಟಕಾ ಬಂಡಿ ಇದು ವಿಧಿ ಅಲೆದಾಡಿಸುವ ಬಂಡಿ

ಕಾಶೀಲಿ ಸ್ನಾನ ಮಾಡು, ಕಾಶ್ಮೀರ ಸುತ್ತಿ ನೋಡು
ಜೋಗದ ಗುಂಡಿ ಒಡೆಯ ನಾನೆಂದೂ ಕೂಡಿ ಹಾಡು
ಅಜಂತ ಎಲ್ಲೋರನ ಬಾಳಲ್ಲಿ ಒಮ್ಮೆ ನೋಡು
ಬಾದಾಮಿ ಐಹೊಳೆಯ ಚಂದಾನಾ ತೂಕ ಮಾಡು
ಕಲಿಯೋಕೆ ಕೋಟಿ ಭಾಷೆ ಆಡೋಕೆ ಒಂದೇ ಭಾಷೆ
ಕನ್ನಡ ಕನ್ನಡ ಕಸ್ತೂರಿ ಕನ್ನಡಾ
ಹುಟ್ಟಿದರೆ.......
ಬದುಕಿದು ಜಟಕಾ ಬಂಡಿ ಇದು ವಿಧಿ ಗುರಿ ತೋರಿಸುವಾ ಬಂಡಿ
ಧ್ಯಾನಕ್ಕೆ ಭೂಮಿ ಇದು ಪ್ರೇಮಕ್ಕೆ ಸ್ವರ್ಗ ಇದು
ಸ್ನೇಹಕ್ಕೆ ಶಾಲೆ ಇದು ಜ್ಞಾನಕ್ಕೆ ಪೀಠ ಇದು
ಕಾಯಕ್ಕೆ ಕಲ್ಪ ಇದು ಶಿಲ್ಪಕ್ಕೆ ತಲ್ಪವಿದು
ನಾಟ್ಯಕ್ಕೆ ನಾಡಿ ಇದು ನಾದಾತರಂಗವಿದು
ಕುವೆಂಪು ಬೇಂದ್ರೆಯಿಂದ ಕಾರಂತ ಮಾಸ್ತಿ ಯಿದ

ಧನ್ಯವೀ ಕನ್ನಡ........ ಗೋಕಾಕಿನ ಕನ್ನಡಾ

ಹುಟ್ಟಿದರೆ........

ಬದುಕಿದು.........ಇದು ವಿಧಿಯೋಡಿಸುವ ಬಂಡಿ

ಬಾಳಿನ ಬೆನ್ನು ಹತ್ತಿ ನೂರಾರು ಊರು ಸುತ್ತಿ

ಏನೇನೋ ಕಂಡ ಮೇಲೂ ನಮ್ಮೂರೇ ನಮಗೆ ಮೇಲು

ಕೈಲಾಸಂ ಕಂಡ ನಮಗೆ ಕೈಲಾಸ ಯಾಕೆ ಬೇಕು?

ದಾಸರ ಕಂಡ ನಮಗೆ ವೈಕುಂಠ ಯಾಕೆ ಬೇಕು?

ಮುಂದಿನ ನನ್ನ ಜನ್ಮ ಬರೆದಿಟ್ಟನಂತೆ ಬ್ರಹ್ಮ

ಇಲ್ಲಿಯೇ ಇಲ್ಲಿಯೇ

ಎಂದಿಗೂ ನಾನಿಲ್ಲಿಯೇ........

ಹುಟ್ಟಿದರೆ........

ಬದುಕಿದು ಜಟಕಾ ಬಂಡಿ ಇದು ವಿಧಿ ಓಡಿಸುವಾ

ಬಂಡಿ

ಇದು ದಡ ಸೇರಿಸುವಾ ಬಂಡಿ

## ಇದೇ ನಾಡು ಇದೇ ಭಾಷೆ

ಇದೇ ನಾಡು ಇದೇ ಭಾಷೆ

ಇದೇ ನಾಡು ಇದೇ ಭಾಷೆ

ಎಂದೆಂದಿಗೂ ನನ್ನದಾಗಿರಲಿ

ಎಲ್ಲೇ ಇರಲಿ ಹೇಗೆ ಇರಲಿ

ಕನ್ನಡವೇ ನಮ್ಮ ಉಸಿರಲ್ಲಿ

ಕರುನಾಡು ಸ್ವರ್ಗದ ಸೀಮೆ

ಕಾವೇರಿ ಹುಟ್ಟಿದ ನಾಡು

ಕಲ್ಲಲ್ಲಿ ಕಲೆಯನ್ನು ಕಂಡ
ಬೇಲೂರ ಶಿಲ್ಪದ ಬೀಡು
ಬಸವೇಶ್ವರ ರನ್ನ ಪಂಪರ
ಕವಿವಾಣಿಯ ಹಾಡು.
ಚಾಮುಂಡಿ ರಕ್ಷೆಯು ನಮಗೆ
ಗೊಮ್ಮಟೇಶ ಕಾವಲು ಇಲ್ಲಿ
ಶೃಂಗೇರಿ ಶಾರದೆ ಲೀಲೆ
ರಸ ತುಂಗೆ ಆಗಿದೆ ಇಲ್ಲಿ
ವಿಶ್ವಖ್ಯಾತಿಯ ವಿಶ್ವೇಶ್ವರಯ್ಯ
ಜನಿಸಿದ ಈ ನಾಡು
ಏಳೇಳು ಜನ್ಮವೇ ಬರಲಿ
ಈ ಮಣ್ಣಲಿ ನಾನು ಹುಟ್ಟುವೆ
ಏನೇನು ಕಷ್ಟವೇ ಇರಲಿ
ಸಿರಿಗನ್ನಡ ತಾಯಿಗೆ ದುಡಿಯುವೆನಾನು ಕನ್ನಡ ನುಡಿ ಕನ್ನಡ
ನನ್ನ ಕನ್ನಡವಾಗಿರಲಿ

## ಜೋಗದ ಸಿರಿ

ಜೋಗದ ಸಿರಿ ಬೆಳಕಿನಲ್ಲಿ ತುಂಗೆಯ ತೆನೆ ಬಳುಕಿನಲ್ಲಿ,
ಸಹ್ಯಾದ್ರಿಯ ಲೋಹದದಿರ ಉತ್ತುಂಗದ ನಿಲುಕಿನಲ್ಲಿ,
ನಿತ್ಯ ಹರಿದ್ವರ್ಣವನದ ತೇಗ ಗಂಧ ತರುಗಳಲ್ಲಿ
ನಿತ್ಯೋತ್ಸವ, ತಾಯಿ, ನಿತ್ಯೋತ್ಸವ ನಿನಗೆ…
ಇತಿಹಾಸದ ಹಿಮದಲ್ಲಿನ ಸಿಂಹಾಸನ ಮಾಲೆಯಲ್ಲಿ,
ಗತ ಸಾಹಸ ಸಾರುತಿರುವ ಶಾಸನಗಳ ಸಾಲಿನಲ್ಲಿ,
ಓಲೆ ಗರಿಯ ಸಿರಿಗಳಲ್ಲಿ, ದೇಗುಲಗಳ ಭಿತ್ತಿಗಳಲಿ
ನಿತ್ಯೋತ್ಸವ ತಾಯಿ, ನಿತ್ಯೋತ್ಸವ ನಿನಗೆ….

ಹಲವೆನ್ನದ ಹಿರಿಮೆಯೆ, ಕುಲವೆನ್ನದ ಗರಿಮೆಯೆ,

ಸದ್ವಿಕಾಸಶೀಲ ನುಡಿಯ ಲೋಕಾವೃತ ಸೀಮೆಯೆ,

ಈ ವತ್ಸರ ನಿರ್ಮತ್ಸರ ಮನದುದಾರ ಮಹಿಮೆಯೆ

ನಿತ್ಯೋತ್ಸವ, ತಾಯಿ, ನಿತ್ಯೋತ್ಸವ ನಿನಗೆ...

## ಋಣ

ಮಕ್ಕಳಿಗೆ ಕತೆ ಎಂದರೆ ಇಷ್ಟ. ನಿಜ ಜೀವನದಲ್ಲಿ ನಡೆಯುವ ಅದೆಷ್ಟೋ ವಿಚಾರಗಳು ಕತೆಯಲ್ಲಿ ಅಡಗಿರುತ್ತವೆ. ನೈತಿಕ ವಿಚಾರಗಳನ್ನು ಕತೆಯ ಮೂಲಕ ಮನದಟ್ಟು ಮಾಡಿಸಲು ಸುಲಭಸಾಧ್ಯ. ಮಕ್ಕಳು ತಾವು ಕೇಳಿದ ಓದಿದ ಕತೆಗಳನ್ನು ಹೇಳಲು ಅವಕಾಶ ನೀಡಬೇಕು. ಬಳಿಕ ಪಾಠಭಾಗದಲ್ಲಿ ನೀಡಿರುವ 'ಋಣ' ಎಂಬ ಕತೆಯನ್ನು ಓದೋಣ ಎಂದು ಹೇಳುತ್ತಾ ಪಾಠಪ್ರವೇಶ ಮಾಡುವುದು.

### ಓದಿರಿ

ಅಧ್ಯಾಪಕರು ತರಗತಿಯಲ್ಲಿ ವಿದ್ಯಾರ್ಥಿಗಳಿಂದ ಕತೆಯನ್ನು ಗಟ್ಟಿಯಾಗಿ ಓದಿಸುವುದು.ಮತ್ತು ವಿವರಣೆ ನೀಡುವುದು. ಅರ್ಥ ತಿಳಿಯದ ಪದಗಳನ್ನು ಅರ್ಥ ಕೋಶದ ಸಹಾಯದಿಂದ ತಿಳಿದುಕೊಳ್ಳಲು ತಿಳಿಸುವುದು. ಆಮೇಲೆ ಮಕ್ಕಳು ಕಥೆಯನ್ನು ಮೌನವಾಗಿ ಓದಲಿ.

### ಉತ್ತರಿಸಿರಿ

ಪಠ್ಯಭಾಗದಲ್ಲಿ ಕೊಡಲಾದ ಪ್ರಶ್ನೆಗಳನ್ನು ಅಧ್ಯಾಪಕರು ಕೇಳುವುದು. ಮಕ್ಕಳು ಗುಂಪಿನಲ್ಲಿ ಚರ್ಚಿಸಿ ಉತ್ತರ ಬರೆದು ಮಂಡಿಸಲಿ. ಅಧ್ಯಾಪಕರು ಕರಿಹಲಗೆಯಲ್ಲಿ ಸರಿಯಾದ ಉತ್ತರವನ್ನು ಬರೆಯುವುದು. ಅದನ್ನು ನೋಡಿ ಮಕ್ಕಳು ತಾವು ಬರೆದ ಉತ್ತರವನ್ನು ಉತ್ತಮ ಪಡಿಸಲಿ.

### ಸಂಭಾಷಣೆ

ಕಥೆಯನ್ನು ಪೂರ್ತಿಯಾಗಿ ಓದಿದ ಮಕ್ಕಳು ಕಥೆಯ ಪಾತ್ರಗಳನ್ನು ಗುರುತಿಸಲಿ ಮತ್ತು ಅವರೊಳಗೆ ನಡೆಯಬಹುದಾದ ಸಂಭಾಷಣೆಯನ್ನು ಬರೆದು ತರಗತಿಯಲ್ಲಿ ಹೇಳಲಿ. ಪ್ರತಿಯೊಂದು ಗುಂಪಿನ ಮಕ್ಕಳು ತಾವು ಬರೆದ ಸಂಭಾಷಣೆಯನ್ನು ಪ್ರಸ್ತುತಪಡಿಸಲು ಅವಕಾಶ ನೀಡುವುದು.

## ಸಂಭಾಷಣೆಯನ್ನು ಹೀಗೂ ಬರೆಯಬಹುದಲ್ಲವೇ?

ಶಂಕರಪ್ಪ : ಲಕ್ಷ್ಮಿ, ತೋಟದ ಕಡೆ ಹೋಗಿ ಬರುತ್ತೇನೆ.

ಲಕ್ಷ್ಮಮ್ಮ : ಸರಿ ಬೇಗ ಬನ್ನಿ. ಹೊತ್ತು ನೆತ್ತಿಗೇರುವ ಮುಂಚೆ ಬಂದು ಬಿಡಿ.

ಶಂಕರಪ್ಪ : ಹೂಂ ಸರಿ. (ತೋಟದಲ್ಲಿ ಕೆಲಸದ ಆಳು ಕೆಂಚ ಸಿಗುತ್ತಾನೆ.) ಲೋ ಕೆಂಚ ಹೇಗಿದಿಯಪ್ಪಾ? ಕೆಲಸ ಎಲ್ಲ ಹೇಗೆ ನಡಿತಾ ಇದೆ?

ಕೆಂಚ : ಏನೋ ನಡಿತಾ ಇದೆ ಸ್ವಾಮಿ. ಈಗೆಲ್ಲ ಕೆಲಸಕ್ಕೆ ಜನಾನೇ ಸಿಕ್ತಿಲ್ಲ. ಎಲ್ಲರೂ ಕೆಲಸ ಹುಡುಕಿಕೊಂಡು ಪಟ್ಟಣದ ಕಡೆ ಹೋಗ್ತಿದ್ದಾರೆ.

ಶಂಕರಪ್ಪ : ಹೌದು ಕೆಂಚ .ಹಿಂದಿನ ಜನರಲ್ಲಿ ಇದ್ದಂತೆ ಎಲ್ಲರನ್ನು ಎಲ್ಲವನ್ನು ಪ್ರೀತಿಸುವ ಕಾಳಜಿ ಈಗ ಜನರಲ್ಲಿ ಇಲ್ಲ. ಏನ್ಮಾಡೋದು ಹೇಳು.

ಕೆಂಚ : ಹೌದು ಬುದ್ಧಿ. (ಶಂಕರಪ್ಪ ಮನೆಗೆ ಬಂದರು.)

ಲಕ್ಷ್ಮಮ್ಮ : ಬಂದ್ರಾ ಕಾಫಿ ಕೊಡಲಾ? ಯಾಕ್ರೀ ಒಂಥರಾ ಇದ್ದೀರಾ? ನೀವು ನನ್ನ ಹತ್ತಿರ ಅಡಗಿಸ್ಬೇಡಿ. ಇನ್ನೆಷ್ಟು ದಿನ ಈ ಇಳಿವಯಸ್ಸಿನಲ್ಲಿ ಈ ಹಳ್ಳಿಕೊಂಪೆಲಿರೋದು? ಆರಾಮವಾಗಿ ಪೇಟೆಯಲ್ಲಿ ಇರಬಹುದಲ್ಲಾ. ಚಂದದ ಮನೆಯಲ್ಲಿದ್ದುಕೊಂಡು ಮಗನ ಕಾರಲ್ಲಿ ತಿರ್ಗಾಡಿಕೊಂಡು ಮೊಮ್ಮಕ್ಕಳೊಂದಿಗೆ ಆಟವಾಡ್ಕೊಂಡು ಖುಷಿಯಲ್ಲಿರ್ಬಹುದಲ್ಲಾ. ದಿನ ಹೋಗೋದೇ ಗೊತ್ತಾಗ್ಲಿಕ್ಕಿಲ್ಲ.

ಶಂಕರಪ್ಪ : ಆಗಲಿ ಆಗುವುದೆಲ್ಲ ಆಗಲಿ.ಅದು ವಿಧಿ ನಿಯಮವಾಗಿದ್ದರೆ ಅದನ್ನು ತಡೆವರಾರು?

## ಪಾತ್ರ ಚಿತ್ರಣ

ಕತೆಯಲ್ಲಿ ಬಂದಿರುವ ಶಂಕರಪ್ಪನ ಪಾತ್ರದಲ್ಲಿ ಮಕ್ಕಳು ಕಂಡುಕೊಂಡ ವಿಶೇಷತೆಗಳನ್ನು ಬಾಯ್ದೆರೆಯಾಗಿ ಹೇಳಲಿ. ಕಂಡುಕೊಂಡ ಮಾಹಿತಿಯ ಆಧಾರದಲ್ಲಿ ಪಾತ್ರ ಚಿತ್ರಣ ಬರೆದು ಮಂಡಿಸಲಿ.

## ಸೂಚಕಗಳು

- ಶಂಕರಪ್ಪ ತನ್ನ ತೋಟದ ಬಗ್ಗೆ ತೋರಿಸುವ ಪ್ರೀತಿ ಕಾಳಜಿ.
- ಶಂಕರಪ್ಪ ಹಿಂದಿನ ದಿನಗಳ ನೆನಪುಗಳನ್ನು ಮೆಲುಕು ಹಾಕುವ ರೀತಿ.
- ಪಟ್ಟಣಕ್ಕೆ ಹೋಗಲು ಮನಸ್ಸಿಲ್ಲದೆ ಪಡುವ ನೋವು.
- ಹಳ್ಳಿಯನ್ನು ಪ್ರೀತಿಸುವ ಗುಣ.
- ಮಗನ ಸಂತೋಷಕ್ಕಾಗಿ ತನ್ನ ಸಂತೋಷವನ್ನೇ ತ್ಯಾಗ ಮಾಡುವ ಮನೋಭಾವ.

## ಪಾತ್ರ ಚಿತ್ರಣ ಹೀಗೂ ಇರಬಹುದಲ್ಲವೇ?

'ಋಣ' ಕತೆ ಯಲ್ಲಿ ಬರುವ ಮುಖ್ಯವಾದ ಪಾತ್ರ ಶಂಕರಪ್ಪನವರದ್ದು. ತಾನು ಪ್ರೀತಿಯಿಂದ ಬೆಳೆಸಿದ ಗಿಡಮರಗಳು, ತೋಟ,ಕಷ್ಟಪಟ್ಟು ಕಟ್ಟಿದ ಮನೆ, ಎಲ್ಲವನ್ನು ತೊರೆದು ದೂರದ ಪಟ್ಟಣಕ್ಕೆ ಹೋಗಿ ನೆಲೆಸಬೇಕಾದ ಅನಿವಾರ್ಯ ಪರಿಸ್ಥಿತಿ ಶಂಕರಪ್ಪನವರಿಗೆ ಎದುರಾಗುತ್ತದೆ. ನಿಧಾನವಾಗಿ ತೋಟದಲ್ಲಿ ತಿರುಗಾಡ ತೊಡಗಿದ ಅವರ ಮನಸ್ಸಿಗೆ ಖಿನ್ನತೆ ಆವರಿಸುತ್ತದೆ. ಏಕಾಂಗಿ ವ್ಯಕ್ತಿಯಂತೆ ನಿಂತ ಅಡಿಕೆ ಮರ ,ತೆಂಗಿನ ಮರಗಳು ,ಯಾಂತ್ರಿಕವಾಗಿ ನೀರು ಚಿಮ್ಮಿಸುತ್ತಿರುವ ಸ್ಪ್ರಿಂಕ್ಲರ್, ಇವೆಲ್ಲವನ್ನು ನೋಡಿ ಅವರ ಮನಸ್ಸು ಬಹಳ ವರುಷಗಳ ಹಿಂದಿನ ದಿನಗಳನ್ನು ನೆನಪಿಸುತ್ತದೆ. ಎಲ್ಲರೂ ಎಲ್ಲವನ್ನು ಪ್ರೀತಿಸುವ ಕಾಳಜಿ ಈಗೆಲ್ಲಿದೆ? ಎಂದು ಮರುಗುತ್ತಾರೆ. ಹಿಂದಿನ ದಿನಗಳಲ್ಲಿ ಮನುಷ್ಯರ ನಡುವಿನ ಸಂಬಂಧ ಪ್ರಕೃತಿಯ ನಡುವಿನ ಸಂಬಂಧ ಬಲವಾಗಿದ್ದುದನ್ನು ನೆನಪಿಸುತ್ತಾ ಪಟ್ಟಣಕ್ಕೆ ಹೋಗಬೇಕಾದ ಅನಿವಾರ್ಯತೆಗೆ ಮನಸ್ಸನ್ನು ಸಜ್ಜುಗೊಳಿಸುತ್ತಾರೆ. ನಮಗಲ್ಲದಿದ್ದರೆ ಬೇರೆಯವರಿಗೆ, ಇನ್ನೊಬ್ಬರಿಗೆ, ಕರುಳ ಸಂಬಂಧ ಹೊಂದಿದವರಿಗೆ ತಿನ್ನುವ ಋಣ ಇರುವವರಿಗೆ ಎಂದು ಸಮಾಧಾನ ಪಟ್ಟುಕೊಳ್ಳುವ ಅವರ ಗುಣ ಮಗನ ಮೇಲಿನ ಪ್ರೀತಿಯನ್ನು ಬಿಂಬಿಸುತ್ತದೆ.

## ಊಹಿಸಿ ಬರೆಯಿರಿ

ಇದೊಂದು ಸೃಜನಶೀಲ ಚಟುವಟಿಕೆಯಾದುದರಿಂದ ಮಕ್ಕಳು ತಮ್ಮ ಕಲ್ಪನೆಗನುಗುಣವಾಗಿ ಆಶಯಕ್ಕೆ ಕುಂದುಂಟಾಗದ ರೀತಿಯಲ್ಲಿ ಬರೆದು ಮಂಡಿಸಲಿ. ಮಕ್ಕಳು ಕಥೆಯನ್ನು ಓದಿ ಅವರದ್ದೇ ಆದ ರೀತಿಯಲ್ಲಿ. ಯೋಚಿಸಲಿ. "ತೋಟವನ್ನು ಮಾರದೇ ಇರುತ್ತಿದ್ದರೆ ಏನಾಗುತ್ತಿತ್ತು?" ಊಹಿಸಿ ಬರೆಯಲು ಮಕ್ಕಳಿಗೆ ಅವಕಾಶ ನೀಡಬೇಕು. ವೈಯಕ್ತಿಕವಾಗಿ ಬರೆದು ಮಂಡನೆಯ ಬಳಿಕ ಗುಂಪಿನಲ್ಲಿ ಉತ್ತಮಪಡಿಸಲಿ. ಕತೆಯನ್ನು ಚಾರ್ಟಿನಲ್ಲಿ ಬರೆದು ಪ್ರದರ್ಶಿಸುವುದು.

## ಕತೆ ಹೇಗಿರಬೇಕು?

- ಆಶಯ ಸ್ಪಷ್ಟವಾಗಿರಬೇಕು.
- ಆರಂಭ, ಬೆಳವಣಿಗೆ, ಮುಕ್ತಾಯಗಳಿರಬೇಕು ಮತ್ತು ಸೂಕ್ತ ಶೀರ್ಷಿಕೆ ಇರಬೇಕು.
- ಭಾವನೆಗಳ ನೈಜತೆ ಇರಬೇಕು.

## ಹೀಗೂ ಊಹಿಸಿ ಬರೆಯಬಹುದಲ್ಲವೇ ?

ಶಂಕರಪ್ಪನವರಿಗೆ ಹಳ್ಳಿಯಲ್ಲಿ ವಿಶಾಲವಾದ ತೋಟ ಮತ್ತು ಮನೆ ಇತ್ತು. ಮಾಸ್ತರಿಕೆ ವೃತ್ತಿಯನ್ನು ಮಾಡುತ್ತಾ ಬಹಳ ಕಷ್ಟಪಟ್ಟು ತೋಟವನ್ನು ಅಭಿವೃದ್ಧಿಪಡಿಸಿದ್ದರು. ತನ್ನ ಮಕ್ಕಳು ಮೊಮ್ಮಕ್ಕಳು ಹಣ್ಣುಗಳನ್ನು ತಿನ್ನುವಂತಾಗಲಿ ಎಂಬ ಮಹಾದಾಸೆಯಿಂದ ಮಾವಿನಕಾಯಿ ಚಿಕ್ಕುಗಳ ಗಿಡಗಳನ್ನು ತಂದು ನೆಟ್ಟಿದ್ದರು . ಮಗ ಚೆನ್ನಾಗಿ ಓದಿ ದೊಡ್ಡ ಆಫೀಸರಾಗಿ ಬೆಂಗಳೂರಿನಲ್ಲಿ ನೆಲೆಸಿದನು. ಬೆಂಗಳೂರಿನಲ್ಲಿ ನೆಲೆಸಿರುವ ಶ್ರೀಮಂತರೊಬ್ಬರ ಮಗಳನ್ನು ಹಿರಿಯರ ಒಪ್ಪಿಗೆಯೊಂದಿಗೆ ಮದುವೆಯಾದನು. ನಂತರ ಆಗಾಗ ಫೋನಿನಲ್ಲಿ ಅಪ್ಪ-ಅಮ್ಮನನ್ನು ಬೆಂಗಳೂರಿಗೆ ಬರುವಂತೆ ಮತ್ತು ಹಳ್ಳಿಯ ಮನೆ ತೋಟವನ್ನು ಮಾರುವಂತೆ ಒತ್ತಾಯಿಸುತ್ತಿದ್ದನು. ತಾನು ನಡೆದಾಡಿದ ನೆಲದ ಮೇಲಿನ ಪ್ರೀತಿಯಿಂದ ಶಂಕರಪ್ಪನವರಿಗೆ ಬೆಂಗಳೂರಿಗೆ ಹೋಗಲು ಮನಸ್ಸು ಒಪ್ಪಲಿಲ್ಲ ಅವರಿಗೆ ತೋಟವನ್ನು ಮಾರಲು ಮನಸ್ಸಿರಲಿಲ್ಲ ತನ್ನ ತಂದೆಯ ಮನಸ್ಸನ್ನು ಅರಿತುಕೊಂಡ ಮಗ ಅವರ ಭಾವನೆಗಳಿಗೆ ಸ್ಪಂದಿಸಿದನು. ತನ್ನ ಹಳ್ಳಿಯ ಮನೆಯ ತೋಟವನ್ನು ನೋಡಿಕೊಳ್ಳಲು ಒಬ್ಬ ಕೆಲಸದವರನ್ನು ನೇಮಿಸಿ ಅಪ್ಪ ಅಮ್ಮನನ್ನು ಬೆಂಗಳೂರಿಗೆ ಕರೆಸಿಕೊಂಡನು. ರಜಾ ದಿನಗಳಲ್ಲಿ ಅಪ್ಪ-ಅಮ್ಮ ಮಕ್ಕಳ ಜೊ ತೆ ಊರಿಗೆ ಬಂದು ಸಂತೋ ಷವಾಗಿ ಕಾಲ ಕಳೆಯ ತೊಡಗಿದರು. ಮೊಮ್ಮಕ್ಕಳು ಅಜ್ಜ ಅಜ್ಜಿಯರ ಜೊತೆ ಬೆರೆತು ಹಳ್ಳಿಯ ಸೌಂದರ್ಯವನ್ನು ಆಸ್ವಾದಿಸಿಕೊಂಡು ತಾಯಿ ಮಣ್ಣಿನಲ್ಲಿ ಕುಣಿದು ಕುಪ್ಪಳಿಸಿ ಸಂತೋಷ ಪಡುವುದನ್ನು ನೋಡಿ ಶಂಕರಪ್ಪನವರು ನೆಮ್ಮದಿಯ ನಿಟ್ಟುಸಿರು ಬಿಟ್ಟರು.

## ಟಿಪ್ಪಣಿ

ಮಕ್ಕಳು ನಿರ್ದಿಷ್ಟವಾದ ವಿಚಾರವನ್ನು ವಸ್ತುನಿಷ್ಠವಾಗಿ ವಿಶ್ಲೇಷಿಸಿ ಸೂಕ್ತವಾದ ನಿರ್ಧಾರವನ್ನು ತೆಗೆದುಕೊಳ್ಳಲು ಸಮರ್ಥರಾಗಬೇಕೆಂಬ ನಿಟ್ಟಿನಲ್ಲಿ ಈ ಚಟುವಟಿಕೆಯನ್ನು ನೀಡಲಾಗಿದೆ. “ಶಂಕರಪ್ಪನವರಿಗೆ ಹಳ್ಳಿಯಲ್ಲೇ ಇರಬೇಕೆಂಬ ಆಸೆ. ಅವರ ಮಗನ ದೃಷ್ಟಿ ಪಟ್ಟಣದ ಕಡೆಗೆ. ಪೇಟೆಯಿಂದ ಬಂದ ಹಿರಿಯರಿಗೆ, ಅವರ ಮಗನಿಗೆ ಹಳ್ಳಿಯ ಮಣ್ಣಿನಲ್ಲಿ ನಡೆದಾಡಬೇಕು ಎನ್ನುವ ಆಸೆ. ಎಂಥಾ ವೈರುಧ್ಯ!”

ಶಂಕರಪ್ಪನವರಿಗೆ ತಾನು ಹುಟ್ಟಿದ ಮನೆ, ಭೂಮಿಯ ಮೇಲೆ ಅಗಾಧವಾದ ಪ್ರೀತಿ. ತನ್ನೂರನ್ನು

ಬಿಟ್ಟು ಹೊರಗೆ ಹೋಗಲು ಅವರ ಮನಸ್ಸು ಒಪ್ಪುವುದಿಲ್ಲ. ಆದರೆ ಇಲ್ಲೇ ಹುಟ್ಟಿ ಬೆಳೆದ ಮಗ ಬೆಂಗಳೂರಿನಂಥ ನಗರಕ್ಕೆ ಹೋಗಿ ನೆಲೆ ನಿಂತ ಮೇಲೆ ಅವನಿಗೆ ಹಳ್ಳಿ ಅಂದರೆ ತಾತ್ಸಾರ . ಪೇಟೆಯಿಂದ ಬಂದ ಹಿರಿಯರಿಗೆ ಅವರ ಮಗನಿಗೆ ಹಳ್ಳಿ ಅಂದರೆ ಪ್ರೀತಿ. ಅಲ್ಲಿಯೇ ನೆಲೆ ನಿಲ್ಲಬೇಕೆಂಬ ಆಸೆ. ಎರಡು ವಿರುದ್ಧ ಮನಸ್ಥಿತಿಯ ಭಾವನೆಗಳನ್ನು ಇಲ್ಲಿ ಕಾಣಬಹುದು.

## ಅನ್ಯ ದೇಶೀ ಯ ಪದಗಳು

ಪಾಠವನ್ನು ಓದಿ ಅಲ್ಲಿ ಬರುವ ಅನ್ಯದೇಶೀಯ ಪದಗಳನ್ನು ಗುರುತಿಸಿ ವೈಯಕ್ತಿಕವಾಗಿ ಬರೆಯಲಿ.

ಪಾಠದಲ್ಲಿ ಬರುವ ಅನ್ಯದೇಶಿಯ ಪದಗಳು

ಸ್ಪ್ರಿಂಕ್ಲರ್, ಕೊಕ್ಕೊ, ಕಾಫಿ, ಪಂಪ್, ಕಾರು, ರಬ್ಬರ್, ಮ್ಯಾ ನೇಜ್ಮೆಂಟ್, ಸೆಟಲ್,ಸೊಸೈಟಿ, ಫೋನ್ ಹಾರ್ನ್,ಸೋಫಾ, ದಸ್ತಾವೇಜು, ರಿಜಿಸ್ಟ್ರೇಷನ್, ರಿಸೈನ್

## ಶಿಷ್ಟ ರೂಪ

ಯಾವುದೇ ಭಾಷೆಯ ಆಡು ಮಾತಿನಲ್ಲಿ ವೈವಿಧ್ಯಗಳು ಇರುತ್ತದೆ.ಲಿಖಿತ ರೂಪ ಮತ್ತು ಆಡು ಮಾತಿನ ಶೈಲಿಯಲ್ಲಿ ವ್ಯತ್ಯಾಸಗಳು ಇರುತ್ತದೆ. ಗ್ರಾಮ್ಯ ಭಾಷೆಯನ್ನು ಶಿಷ್ಟ ರೂಪಕ್ಕೆ ಬದಲಾಯಿಸುವುದರ ಮೂಲಕ ಇವೆರಡರೊಳಗಿನ ವ್ಯತ್ಯಾಸವನ್ನು ತಿಳಿಸುವುದು. ಈ ಚಟುವಟಿಕೆಯ ಉದ್ದೇಶವಾಗಿದೆ. ಮನೆಯಲ್ಲಿ ಮಾತನಾಡುವ ಎಲ್ಲಾ ಪದಗಳು ಬರವಣಿಗೆಯಲ್ಲಿ ಹಾಗೆಯೇ ಇರುತ್ತವೆಯೇ? ಎಂದು ಕೇಳುತ್ತಾ ಅವುಗಳ ವ್ಯತ್ಯಾಸವನ್ನು ತಿಳಿಸುವುದು. ಪದ್ಯದಲ್ಲಿರುವ ಗ್ರಾಮ್ಯ ಪದಗಳತ್ತ ಗಮನ ಸೆಳೆಯುವುದು. ಮಕ್ಕಳು ಪಾಠವನ್ನು ಓದಿದಾಗ ಸಿಗುವ ಗ್ರಾಮ್ಯ ಪದಗಳನ್ನು ಪಟ್ಟಿ ಮಾಡಲಿ. ಬಳಿಕ ಅವುಗಳನ್ನು ಶಿಷ್ಟ ರೂಪದಲ್ಲಿ ಬರೆಯಲಿ.

| **ಗ್ರಾಮ್ಯ ಪದಗಳು** | **ಶಿಷ್ಟ ರೂಪ** |
|---|---|
| ಚೇಪು | ಎರಚುವುದು |
| ಹತ್ರ | ಹತ್ತಿರ |
| ಹಳ್ಳಿ ಕೊಂಪೆಲಿರೋದು | ಹಳ್ಳಿಯ ಕೊಂಪೆಯಲ್ಲಿ ಇರುವುದು |
| ಪೇಟೇಲಿರಬಹುದಲ್ಲಾ | ಪೇಟೆಯಲ್ಲಿ ಇರಬಹುದಲ್ಲ |
| ತಿರ್ಗಾಡಿಕೊಂಡು | ತಿರುಗಾಡಿಕೊಂಡು |
| ಆಟವಾಡ್ಕೊಂಡು | ಆಟವಾಡಿಕೊಂಡು |

| | |
|---|---|
| ಖುಷಿಯಲ್ಲಿರ್ಬಹುದಲ್ಲ | ಖುಷಿಯಲ್ಲಿ ಇರಬಹುದಲ್ಲ |
| ಗೊತ್ತಾಗ್ಲಿಕಿಲ್ಲ | ಗೊತ್ತಾಗಲಿಕ್ಕಿ ಲ್ಲ |
| ಇರ್ತಾನೆ | ಇರುತ್ತಾನೆ. |

## ಸಂಯುಕ್ತವಾಕ್ಯ– ಸರಳ ವಾಕ್ಯ

ಸರಳ ಹಾಗೂ ಸಯುಕ್ತವಾಕ್ಯಗಳಲ್ಲಿನ ವ್ಯತ್ಯಾಸವು ಮಕ್ಕಳಿಗೆ ತಿಳಿದಿರಬೇಕು. ಒಂದು ಸರಳ ವಾಕ್ಯದಲ್ಲಿ ಒಂದು ಪೂರ್ಣ ಕ್ರಿಯಾಪದವಿರುತ್ತದೆ. ಎರಡು ಅಥವಾ ಎರಡಕ್ಕಿಂತ ಹೆಚ್ಚು ಸರಳ ವಾಕ್ಯಗಳು ಸೇರಿಕೊಂಡಿರುವ ವಾಕ್ಯ ಸಂಯುಕ್ತವಾಕ್ಯ ಎನಿಸುತ್ತದೆ.

- ತೋಟದಿಂದ ನಿಧಾನವಾಗಿ ಮೇಲೆ ಬಂದು ಕಾಡಿನ ಪಕ್ಕದ ಬೆಟ್ಟು ಗದ್ದೆಗಳ ಕಡೆ ನಡೆದರು.
- ತೋಟದಿಂದ ನಿಧಾನವಾಗಿ ಮೇಲೆ ಬಂದರು.
- ಕಾಡಿನ ಪಕ್ಕದ ಬೆಟ್ಟು ಗದ್ದೆಗಳ ಕಡೆ ನಡೆದರು.
- ಕೆಲಸದ ಆಳುಗಳ ಮನೆಯ ಬಳಿಯಾಗಿ ಬಂದು ಅವರ ಸುಖ ದುಃಖ ವಿಚಾರಿಸಿ ಮತ್ತೆ ಮನೆಯ ಕಡೆ ಹೆಜ್ಜೆ ಹಾಕಿದರು.
- ಕೆಲಸದ ಆಳುಗಳ ಮನೆಯ ಬಳಿಯಾಗಿ ಬಂದರು.
- ಅವರ ಸುಖ ದುಃಖ ವಿಚಾರಿಸಿದರು.
- ಮತ್ತೆ ಮನೆಯ ಕಡೆ ಹೆಜ್ಜೆ ಹಾಕಿದರು.
- ಬಚ್ಚಲು ಮನೆಗೆ ಹೋಗಿ ಕೈ ಕಾಲು ತೊಳೆಯುವಷ್ಟರಲ್ಲಿ ಗಂಟೆ ಹತ್ತು ಬಡಿದದ್ದು ಸ್ಪಷ್ಟವಾಗಿ ಕೇಳಿಸಿತು.
- ಬಚ್ಚಲು ಮನೆಗೆ ಹೋಗಿ ಕೈ ಕಾಲು ತೊಳೆದರು.
- ಅಷ್ಟರಲ್ಲಿ ಗಂಟೆ ಹತ್ತು ಬಡಿದದ್ದು ಸ್ಪಷ್ಟವಾಗಿ ಕೇಳಿಸಿತು.

**ಪೂರಕ ಓದಿಗೆ**

# ಅಮ್ಮ

ಅಲಸೂರಿನ ಸೋಮೇಶ್ವರ ದೇವಸ್ಥಾನದಿಂದ ಎರಡು ಕ್ರಾಸ್ ಆಚೆಗೆ ರಾಮು ಮನೆಯಿತ್ತು. ಆ ಮನೆಯಲ್ಲಿದ್ದವರು ರಾಮು ಮತ್ತು ಅವನ ತಾಯಿ ಇಬ್ಬರೇ. ರಾಮು ಹುಟ್ಟಿದ ಎರಡೇ ತಿಂಗಳಲ್ಲಿ ಆತನ ತಂದೆ ತೀರಿಕೊಂಡಿದ್ದ. ಮನೆಮನೆಯ ಪಾತ್ರ ತೊಳೆದು, ಆ ವಿಧವೆ ಮಗನನ್ನು ಸಾಕುತ್ತಿದ್ದಳು. ಆಕೆಗೆ ಒಂದು ಕಣ್ಣಿರಲಿಲ್ಲ. ಹಾಗಾಗಿ, ಒಂಥರಾ ವಿಕಾರವಾಗಿ ಕಾಣುತ್ತಿದ್ದಳು. ಆಕೆ ಎಲ್ಲಿಗಾದರೂ ಹೊರಟರೆ ಸಾಕು, ಎದುರಾದ ಜನರೆಲ್ಲಾ 'ಅಯ್ಯಯ್ಯೋ ಕುರುಡಿ ಬಂದ್ಲು ಕುರುಡಿ' ಅನ್ನುತ್ತಿದ್ದರು. ಆಕೆ, ಇದೆಲ್ಲಾ ಕೇಳಿಸಿದರೂ ಕೇಳದಂತೆ ಇದ್ದು ಬಿಡುತ್ತಿದ್ದಳು.

ಒಬ್ಬನೇ ಮಗನಲ್ಲವೆ? ಅವನನ್ನು ಚೆನ್ನಾಗಿ ಓದಿಸಬೇಕು. ಅವನು ಕೇಳಿದ್ದನ್ನೆಲ್ಲ ಕೊಡಿಸಬೇಕು. ದಿನಾ ಅವನನ್ನು ಶಾಲೆಗೆ ಕರೆದೊಯ್ದು, ಟಾಟಾ... ಸೀಯೂ... ಬೈಬೈ... ಹೇಳಿ ಹಿಂದಿರುಗ ಬೇಕು... ಇದು ಆಕೆಯ ಬಯಕೆಯಾಗಿತ್ತು. ಹತ್ತಾರು ಮಂದಿ ಯನ್ನು ಕಾಡಿ-ಬೇಡಿ ಒಂದಿಷ್ಟು ದುಡ್ಡು ಹೊಂದಿಸಿ ಮಗನನ್ನು ಸ್ಕೂಲಿಗೆ ಸೇರಿಸಿಯೇ ಬಿಟ್ಟಳಾಕೆ. ಆದರೆ ಈ ರಾಮು, ಅಮ್ಮನ ಬಗ್ಗೆ ಚಿಕ್ಕಂದಿನಿಂದಲೇ ತಿರಸ್ಕಾರ ಬೆಳೆಸಿಕೊಂಡ. ಅಮ್ಮ ಕುರುಡಿ ಎಂಬುದೇ ಅವನ ತಿರಸ್ಕಾರಕ್ಕೆ ಕಾರಣವಾಗಿತ್ತು ಅದೊಂದು ದಿನ ಈ ಪಾಪದ ಹೆಂಗಸು ಶಾಲೆಯ ಗೇಟ್ ನವರೆಗೂ ಬಂದು 'ಕಂದಾ, ಹುಶಾರು ಕಣಪ್ಪಾ ಟಾಟಾ ಸೀಯೂ...' ಅನ್ನುತ್ತಿರುವಾಗಲೇ ಅಲ್ಲಿದ್ದ ಹುಡುಗರೆಲ್ಲ 'ರಾಮ, ಏನೋ ಇದೂ? ನಿಮ್ ತಾಯಿ ಕುರುಡಿನೇನೋ ಅಂದೇಬಿಟ್ಟರು.

'ದೇವರೇ, ಭೂಮಿ ಈಗಲೇ ಬಾಯ್ದಿಡಬಾರದೆ' ಅಂದುಕೊಂಡ ರಾಮು. ನಂತರ ಅಮ್ಮನೆಡೆಗೆ ಬಂದು ತಿರಸ್ಕಾರದ ನೋಟ ಬೀರಿ ಶಾಲೆಗೆ ಹೋಗಿಬಿಟ್ಟ ಶಾಲೆಯಿಂದ ಹೊರಬರುವ ಹೊತ್ತಿಗೆ ರಾಮು ಒಂದು ನಿರ್ಧಾರಕ್ಕೆ ಬಂದಿದ್ದ, 'ಅಮ್ಮ ಕುರೂಪಿ ಅಮ್ಮ ಕುರುಡಿ. ಅವಳ ಜತೆಗಿದ್ದರೆ ಸಮಾಜ ನನ್ನನ್ನು ಅಪಹಾಸ್ಯ ಮಾಡುತ್ತದೆ. ಅವಳಿಂದ ದೂರವಿರುವುದೇ ಒಳ್ಳೆಯದು. ಅಮ್ಮನ ಸಾಂಗತ್ಯ ಬೇಡವೇ ಬೇಡ.'

ಸುತ್ತಮುತ್ತಲಿನ ಜನರ ಪರಿಹಾಸ್ಯದ ಮಾತು ರಾಮುಗೆ ವಿಪರೀತ ಅವಮಾನ ಉಂಟು ಮಾಡಿತ್ತು. ಹಾಗಾಗಿ ಮರುದಿನದಿಂದಲೇ ರಾಮು ಬದಲಾದ. ಅಮ್ಮನೊಂದಿಗೆ ಮಾತುಬಿಟ್ಟ ಆಕೆಯನ್ನು ನೋಡುವುದನ್ನೂ ಕಡಿಮೆ ಮಾಡಿದ. ಹೆತ್ತ ಕರುಳಲ್ಲವೆ? ಮರುಗಿತು. ನರಳಿತು. ಕಡಗೊಮ್ಮೆ 'ಕಂದಾ, ಯಾಕಪ್ಪಾ ಹೀಗೆ ಮಾಡ್ತಿದ್ದೀ' ಎಂದು ಕೇಳಿದಳು ಆ ತಾಯಿ.

'ನೋಡೂ, ನೀನು ಕುರುಡಿ, ನಿನ್ನದು ಅಸಹ್ಯದ ಮುಖ. ನೀನು ಜತೆಗೆ ಬಂದ್ರೆ ಎಲ್ಲರೂ ನನ್ನನ್ನು ಅಪಹಾಸ್ಯಮಾಡ್ತಾರೆ. ನನ್ನ ಜತೆ ಇರೋ ಬದಲು; ನನ್ನನ್ನು ಗೆಳೆಯರ ಮಧ್ಯೆ ನಗೆಪಾಟಲಿಗೆ ಗುರಿ ಮಾಡುವ ಬದಲು ನೀನು ಎಲ್ಲಾದ್ರೂ ಹೋಗಿ ಸಾಯಬಾರದೇ?' ರಾಮು ತನ್ನ ವಯಸ್ಸಿಗೆ ಮೀರಿದ ಮಾತಾಡಿಬಿಟ್ಟ ಈ ಮಧ್ಯೆಯೇ ಅವನು ಜವಾಹರ್ ನವೋದಯ ವಿದ್ಯಾಲಯದ ಪರೀಕ್ಷೆ ಬರೆದು ಪಾಸೂ ಆದ...

ಜವಾಹರ್ ನವೋದಯ ವಿದ್ಯಾಲಯಕ್ಕೆ ಬಂದದ್ದೇ ರಾಮನ ಅದೃಷ್ಟ ಖುಲಾಯಿಸಿತು. ಆತ

ಇನ್ನಿಲ್ಲದ ಶ್ರದ್ದೆಯಿಂದ ಓದಿದ. ಕುರೂಪಿ ಅಮ್ಮನಿಂದ ದೂರವಿರಬೇಕೆಂದೇ ಓದಿದ. ಉದ್ದಕ್ಕೂ ಪ್ರಥಮ ಸ್ಥಾನವನ್ನೇ ಪಡೆದ. ಡಿಗ್ರಿ ಮುಗಿದದ್ದೇ ತಡ, ದೆಹಲಿಯಲ್ಲಿ ಭಾರೀ ಸಂಬಳದ ಹುದ್ದೆಯೂ ಅವನಿಗೆ ಸಿಕ್ಕಿಬಿಟ್ಟಿತು. ಒಂದೆರಡು ವರ್ಷಗಳಲ್ಲೇ ರಾಮು ದೊಡ್ಡ ಹೆಸರು ಮಾಡಿದ. ಅವನ ರೂಪು, ವಿದ್ಯೆ, ಅಧಿಕಾರಕ್ಕೆ ಮನಸೋತ ಗಣ್ಯರೊಬ್ಬರು ಮಗಳನ್ನು ಕೊಟ್ಟು ಮದುವೆಯನ್ನೂ ಮಾಡಿದರು. 'ನಂಗೆ ಅಪ್ಪ-ಅಮ್ಮ ಇಬ್ಬರೂ ಇಲ್ಲ' ಎಂದೇ ಅವರೊಂದಿಗೆ ರಾಮು ಹೇಳಿಕೊಂಡಿದ್ದ ಅವರಿಗೆ ಬೇಕಿದ್ದುದು ಅಳಿಯ, ಅವನ ಅಧಿಕಾರ. ಹುಡುಗನಿಗೆ ಹಿಂದೆ ಮುಂದೆ ಇಲ್ಲದೇ ಇರುವುದು ಒಳ್ಳೆಯದೇ ಆಯ್ತು ಅಂದುಕೊಂಡರು ಅವರು. ನಂತರದ ಒಂದೆರಡು ವರ್ಷಗಳಲ್ಲಿಯೇ ರಾಮುಗೆ ಮಕ್ಕಳಾದವು. ಈ ಮಧ್ಯೆಯೇ ಅವನಿಗೆ ಯಾವುದೋ ಪ್ರಶಸ್ತಿ ಕೂಡ ಸಿಕ್ಕಿ, ಅದು ನಾಡಿನ ಎಲ್ಲ ಪತ್ರಿಕೆಗಳಲ್ಲಿ ಸುದ್ದಿಯಾಯಿತು.

ಅಬ್ಬ, ಆ ಕುರುಡಿ ಅಮ್ಮನಿಂದ ಕಡೆಗೂ ತಪ್ಪಿಸಿಕೊಂಡ ಎಂದು ತನ್ನೊಳಗೆ ತಾನೇ ಹೇಳಿಕೊಳ್ಳುತ್ತ ಅದೊಂದು ಬೆಳಗ್ಗೆ ಮಕ್ಕಳೊಂದಿಗೆ ಆಟದಲ್ಲಿ ತೊಡಗಿದ್ದ ರಾಮು, ಆಗಲೇ ಮನೆಯ ಬಾಗಿಲಲ್ಲಿ ಆಕೆಯ ನೆರಳು ಕಾಣಿಸಿಕೊಂಡಿತು. ಅನುಮಾನವೇ ಬೇಡ. ಅವರೆಗೆ ಒಂಟಿಗಣ್ಣಿನ ಹೆಂಗಸು, ತನ್ನ ಅಮ್ಮ ಈ ಕುರುಡಿ ದಿಲ್ಲಿಗೂ ಬಂದಳಲ್ಲ ಅನ್ನಿಸಿ ರಾಮುಗೆ ಮೊದಲಿಗೆ ಬೆರಗಾಯಿತು ಆಕೆ ಮುಂದೆ ತನ್ನೊಂದಿಗೇ ಉಳಿಯಬಹುದು ಅನ್ನಿಸಿದಾಗ ಮಾತ್ರ ವಿಪರೀತ ಸಿಟ್ಟು ಬಂತು. ಆತ ಕೂತಲ್ಲಿಂದಲೇ ಅಬ್ಬರಿಸಿದ 'ಏ ಮುದುಕೀ, ಹೇಳದೆ ಕೇಳದೆ ನಮ್ಮ ಮನೆಗೆ ಹೇಗೆ ಬಂದೆ? ಯಾಕೆ ಬಂದೆ? ನಿನ್ನ ಕುರೂಪ ಕಂಡ್ರೆ ಮಕ್ಕಳು ಹೆದರವರು. ನೀನೇ ಬೇಗ ಹೋಗ್ತಿಯೋ, ಅಥವಾ ನಾನೇ ಕತ್ತು ಹಿಡಿದು ನೂಕಬೇಕೋ...'

ಆ ಮುದುಕಿಯ ಒಂಟಿಕಣ್ಣಿಂದ ಥಕ್ಕನೆ ಎರಡು ಹನಿ ಕಂಬನಿ ಉರುಳಿ ಬಿತ್ತು ಆಕೆ ಸಂಕಟದ ದನಿಯಲ್ಲಿ ಹೇಳಿದಳು: ' ರಾಮೂ ತಪ್ಪಾಯ್ತು ಕಣಪ್ಪಾ ನಂಗೆ ಅಡ್ರೆಸ್ ಗೊತ್ತಾಗಲಿಲ್ಲ. ಹೀಗೇ ಬಂದುಬಿಟ್ಟೆ ಕ್ಷಮಿಸಿಬಿಡಪ್ಪಾ..' ಇಷ್ಟು ಹೇಳಿ ಆಕೆ ಹೋಗಿಬಿಟ್ಟಳು. ಉಹುಂ, ರಾಮುಗೆ ಆಗಲೂ ಅಯ್ಯೋ ಅನ್ನಿಸಲಿಲ್ಲ ಪೀಡೆ ತೊಲಗಿತು ಅಂದುಕೊಂಡು ತೆಪ್ಪಗಾದ.

ಈ ಘಟನೆ ನಡೆದು ಒಂದೂವರೆ ತಿಂಗಳ ನಂತರ ಕಚೇರಿ ಕೆಲಸದ ನಿಮಿತ್ತ ರಾಮು ಬೆಂಗಳೂರಿಗೆ ಬರಬೇಕಾಗಿ ಬಂತು. ಬಂದ ಕೆಲಸ ಮುಗಿಸಿದ. ಯಾಕೋ ಹಳೆಯ ಬದುಕು ನೆನಪಾಯಿತು. ಒಂದ್ಸಲ, ತಾವಿದ್ದ ಹಳೆಯ ಮನೆಯ ಬಳಿ ಹೋಗಬೇಕು ಅನ್ನಿಸಿತು. ಒಂಟಿಗಣ್ಣಿನ ಅಮ್ಮ ಇದ್ದಾಳು? ಇದ್ದರೆ ಹೇಗಿದ್ದಾಳೆ? ತನ್ನನ್ನು ನೋಡಿ ಏನಂತಾರೆ? ಎಂದುಕೊಳ್ಳುತ್ತಾ ಅದೇ ಅಲಸೂರಿನ ಸೋಮೇಶ್ವರ ದೇಗುಲದ ಮನೆಯ ಬಳಿಗೆ ಬಂದೇಬಿಟ್ಟ ಅಮ್ಮನಿದ್ದ ಮನೆ ಹಾಗೇ ಇತ್ತು ಆದರೆ, ಒಳಗೆ ಆಕೆಯಿರಲಿಲ್ಲ. ಅಕ್ಕಪಕ್ಕದವರು ರಾಮುವನ್ನು ಗುರ್ತಿಸಿದರು. "ವಾರದ ಹಿಂದೆ ನಿಮ್ಮಮ್ಮ ಹೋಗಿಬಿಟ್ಟು. ಕಡೇ ಗಳಿಗೇಲಿ ನಿನ್ನನ್ನು ತುಂಬಾ ನೆನಪಿಸಿಕೊಂಡಳು ಕಣಪ್ಪಾ ತಗೋ, ನಿನಗೊಂದು ಕವರ್ ಕೊಟ್ಟಿದ್ದಾಳೆ' ಅಂದರು. ರಾಮು, ಅಂಜುತ್ತ ಅಂಜುತ್ತಲೇ ಆ ಕವರ್ ಪಡೆದ. ನಂತರ ಕಾರಲ್ಲಿ ಕೂತು ಕುತೂಹಲದಿಂದಲೇ ಅದನ್ನು ಒಡೆದ. ಅಲ್ಲಿದ್ದ ಪತ್ರದಲ್ಲಿ ಹೀಗಿತ್ತು: 'ಕಂದಾ, ಕಡೆಗೂ ನಿನ್ನನ್ನು ನೋಡದೇ ಸತ್ತು ಹೋಗ್ತಾ ಇದೀನಿ. ಕ್ಷಮಿಸಿಬಿಡು ಚಿನ್ನಾ ನಿಂಗೇ ಗೊತ್ತಿದೆಯಲ್ಲ? ನೀನಿಲ್ಲದೆ ನಂಗೆ ಇನ್ನೊಂದು ಜಗತ್ತೇ ಇರಲಿಲ್ಲ.

ನನ್ನ ನೆರಳು, ನನ್ನ ಉಸಿರು, ನನ್ನೆದೆಯ ಹಾಡು ಎಲ್ಲವೂ ನೀನೇ ಆಗಿದ್ದೆ. ಹಾಗಿದ್ರೂ ನನ್ನ ಕುರುಡುತನದ ನೆಪ ಹೇಳಿ ನೀನು ಬೇರೆಯಾಗಿಬಿಟ್ಟೆ ದೆಹಲಿಗೆ ಹೋದೆ. ಅಷ್ಟೆತ್ತರ ಬೆಳೆದೆ. ಪ್ರಶಸ್ತಿ ತಗೊಂಡೆ! ಮದುವೆ ಯಾದೆ. ಇಲ್ಲಿ ನಾನು, ದಿನದಿನವೂ ನಿನ್ನ ನೆನಪಲ್ಲೇ ಬದುಕಿದೆ ಕಣೋ. ಕಡೆಗೂ ಒಮ್ಮೆ ನಿನ್ನ ಬದುಕು, ನಿನ್ನ ವೈಭವ, ನಿನ್ನ ಸಂಸಾರವನ್ನು ಕಣ್ತುಂಬ ನೋಡೋಣ ಅನ್ನಿಸಿ ಒಕ್ಕಣ್ಣಿನ ನಾನು ಸೀದಾ ದೆಹಲಿಗೆ ಬಂದೇ ಬಿಟ್ಟೆ ಕನ್ನಡವಲ್ಲದೆ ಬೇರೆ ಭಾಷೆ ತಿಳಿಯದ ನಾನು; ಬೆಂಗಳೂರಿನ ಬಸ್ ಸ್ಟ್ಯಾಂ ಡ್ ಬಿಟ್ಟರೆ ಬೇರೊಂದು ಊರನ್ನೇ ಕಂಡಿರದ ನಾನು; ದೆಹಲಿಗೆ ಬಂದದ್ದು, ಅಲ್ಲಿ ವಾರಗಟ್ಟಲೆ ಅಬ್ಬೇಪಾರಿಯಾಗಿ ಅಲೆದದ್ದು, ಅದು ಹೇಗೋ ನಿನ್ನ ಮನೆ ಹುಡುಕಿದ್ದೇ ಒಂದು ದೊಡ್ಡ ಸಾಹಸ. ಆದರೆ...

ಒಂದು ಸತ್ಯ ಹೇಳಲಾ? ಕಂದಾ.... ಒಂದನೇ ಕ್ಲಾಸಲ್ಲಿದ್ದಾಗ ನಿಂಗೆ ಆ್ಯಕ್ಸಿಡೆಂಟ್ ಆಗಿತ್ತು. ಅಪಘಾತದ ತೀವ್ರತೆಗೆ ನಿನ್ನ ಒಂದು ಕಣ್ಣೇ ಹೋಗಿತ್ತು 'ನೋಡಮ್ಮಾ, ಒಂದು ಕಣ್ಣು ಹೋಗಿಬಿಟ್ಟಿದೆ. ಹಾಗಾಗಿ ಮುಂದೆ ಸಾಯೋತನಕ ನಿನ್ನ ಮಗ ಒಕ್ಕಣ್ಣಿನವ ಆಗಿದ್ದಾನೆ' ಅಂದಿದ್ರು ಡಾಕ್ಟರು ನನ್ನ ಮಗನಿಗೆ ಒಕ್ಕಣ್ಣೆ? ಬೇಡ ಬೇಡ ಅಂದಿತು ಮನಸು. ಅಷ್ಟೆ, ಡಾಕ್ಟರಿಗೆ ಕೈ ಮುಗಿದೆ. ಕಾಲು ಹಿಡಿದೆ. ಗೋಳಾಡಿದೆ. ಬೇಡಿಕೊಂಡೆ. ಹತ್ತಾರು ಮನೇಲಿ ಸಾಲ ತಂದು- 'ಈ ದುಡ್ಡು ತಗೊಳ್ಳಿ ಡಾಕ್ಟ ನನ್ನ ಒಂದು ಕಣ್ಣನ್ನೇ ತೆಗೆದು ನನ್ನ ಮಗೂಗೆ ಜೋಡಿಸಿ. ನಾನು ಇವತ್ತೋ ನಾಳೆಯೋ ಸಾಯುವ ಹೆಂಗಸು. ನನಗೆ ಒಂದೇ ಕಣ್ಣಿದ್ರೂ ಸಾಕು' ಅಂದೆ. ಡಾಕ್ಟರ್ ಹಾಗೇ ಮಾಡಿದ್ರು...

ಸಾಯುವವರೆಗೂ ಈ ವಿಷಯ ಹೇಳಬಾರು ಅಂತ ನಂಗೆ ಆಸೆಯಿತ್ತು ಹಾಗೇ ಬದುಕಿದೆ. ಈಗ ಸತ್ತ ನಂತರ ಕೇಳ್ತಾ ಇದೀನಿ ಕಂದಾ... ಒಂದ್ಸಲ, ಒಂದೇ ಒಂದ್ಸಲ ನನ್ನನ್ನು 'ಅಮ್ಮಾ' ಎಂದು ಕರೆಯಪ್ಪಾ.. ಹಾಗಂತ ಕರೆಸ್ಕೋಬೇಕು ಅನ್ನೋದು ನನ್ನ ಹಿರಿಯಾಸೆ ಮಗನೇ...! ಉಹುಂ, ನೀನು ಯಾವತ್ತೂ ಅಳಬಾರದು. ಕಣ್ಣೀರು ಹಾಕಬಾರದು. ನಿನ್ನ ಕಣ್ಣೊಳಗೇ ನಾನಿರುವಾಗ ಚಿಂತೆಯೇಕೆ ಮಗನೇ...'

ಪತ್ರ ಓದಿ ಮುಗಿಸಿದ ರಾಮು 'ಅಮ್ಮಾ' ಎಂದು ಚೀರಿದ...

ಈ ಗಡಿಬಿಡಿಯ ಬದುಕಲ್ಲಿ ನಾವು-ನೀವು ಎಲ್ಲರಿಗೂ ಅಷ್ಟೆ ಅಮ್ಮ ಎಂದರೆ ಅಸಡ್ಡೆ, ಅಮ್ಮ ಎಂದರೆ ತಿರಸ್ಕಾರ, ಅಮ್ಮ ಎಂದರೆ ವಿಪರೀತ ಸಲುಗೆ ಮತ್ತು ಅಮ್ಮನ ಮೇಲೆ ವಿನಾಕಾರಣ ಸಿಟ್ಟು! ಬೇಡ, ನಾವ್ಯಾರೂ ರಾಮು ಆಗುವುದು ಬೇಡ. ಆತನ ಅಮ್ಮನಿಗೆ ಒದಗಿದ ಕಡುಕಷ್ಟ ನಮ್ಮ ಅಮ್ಮಂದಿರ ಕೈ ಹಿಡಿಯುವುದೂ ಬೇಡ...

**ಎ. ಆರ್. ಮಣಿಕಾಂತ್ - ಅಮ್ಮ ಹೇಳಿದ ಎಂಟು ಸುಳ್ಳುಗಳು ಪುಸ್ತಕದಿಂದ ಆಯ್ದ ಕತೆ**

# ಶಾಂತಿ ನಗರ

ಪರಿಸರಮಾಲಿನ್ಯ ಎಂಬುದು ಇಂದಿನ ಒಂದು ಪ್ರಮುಖ ಜಾಗತಿಕ ಸಮಸ್ಯೆ. ಮನುಷ್ಯನ ಸ್ವಾರ್ಥ ದುರಾಸೆಯ ಪ್ರತಿಫಲವಾಗಿ ನಮ್ಮ ಪರಿಸರ ಮಲಿನಗೊಳ್ಳುತಿದೆ ಎಂಬ ವಾಸ್ತವವನ್ನು ವಿದ್ಯಾರ್ಥಿಗಳು ಅರಿತುಕೊಳ್ಳುವಂತಾಗಬೇಕು ಮತ್ತು ಅವರಲ್ಲಿ ಪರಿಸರವನ್ನು ಕಾಪಾಡಿಕೊಳ್ಳುವ ಜಾಗೃತಪ್ರಜ್ಞೆ ಮೂಡಿ ಬರಲು ಈ ಪಾಠ ಸಹಕಾರಿ. ಅಧ್ಯಾಪಕರು ಪರಿಸರ ಮಾಲಿನ್ಯ ತಂದೊಡ್ಡಿದ ಭೀಕರ ಸಮಸ್ಯೆಗಳನ್ನು ತೋರಿಸುವ ಕೆಲವು ಚಿತ್ರಗಳನ್ನು ಕಂಪ್ಯೂಟರ್ ಪರದೆಯ ಮೂಲಕ ತೋರಿಸುವುದು. ಮತ್ತು ಇದರ ಕುರಿತಾದ ಕೆಲವು ಪ್ರಶ್ನೆಗಳನ್ನು ಕೇಳುವುದು. ಈ ಚಿತ್ರಗಳು ಏನನ್ನು ಸೂಚಿಸುತ್ತವೆ?

ಈ ರೀತಿಯ ಮಲಿನತೆಗೆ ಕಾರಣಗಳೇನು? ಮಕ್ಕಳು ಕಾರಣಗಳನ್ನು ಗುಂಪಿನಲ್ಲಿ ಚರ್ಚೆ ಮಾಡಿ ಬರೆಯಲಿ ಮತ್ತು ಅದನ್ನು ಮಂಡಿಸಲು ಅವಕಾಶ ನೀಡುವುದು. ನಂತರ ಅಧ್ಯಾಪಕರು ಪಾಠ ಭಾಗವನ್ನು ಓದುವುದು, ವಿವರಿಸುವುದು, ಕಠಿಣ ಶಬ್ದಗಳ ಅರ್ಥವನ್ನು ತಿಳಿಸುವುದು ಮತ್ತು ಮಕ್ಕಳಿಗೆ ಓದಲು ಹೇಳುವುದು.

## ಉತ್ತರಿಸಿರಿ

ಪಾಠ ಭಾಗದ ಆಶಯವನ್ನು ತಿಳಿದುಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಮಕ್ಕಳು ಪರಸ್ಪರ ಚರ್ಚಿಸಿ ಉತ್ತರ ಬರೆಯಲಿ. ಬಳಿಕ ತರಗತಿಯಲ್ಲಿ ಮಂಡಿಸಿ ಅಧ್ಯಾಪಕರ ಸಹಾಯದಿಂದ ಉತ್ತಮಪಡಿಸಲಿ.

## ಟಿಪ್ಪಣಿ

ನಿಮ್ಮ ಸುತ್ತಮುತ್ತಲು ಕಾಣುವಂತಹ ಸುಂದರ ಸ್ಥಳಗಳು ಮನುಷ್ಯನ ಸ್ವಾರ್ಥದಿಂದ ನಾಶವಾಗುವುದನ್ನು ನೋಡಿದಿರಲ್ಲವೇ? ಇವುಗಳನ್ನು ನೋಡಿದಾಗ ನಿಮ್ಮ ಮನಸ್ಸಿನಲ್ಲಿ ಮೂಡಿದ ಭಾವನೆಗಳು ಯಾವುವು? ನಾಶವಾಗುತ್ತಿರುವ ಹೊಲಗದ್ದೆ ಬೆಟ್ಟ ಗುಡ್ಡಗಳನ್ನು ಸಂರಕ್ಷಿಸಲು ನೀವು ಕಂಡುಕೊಳ್ಳುವ ಪರಿಹಾರಗಳೇನು? ಚರ್ಚೆ ನಡೆಸಿ ಇದರ ಕುರಿತು ಟಿಪ್ಪಣಿ ರಚಿಸಲು ಹೇಳುವುದು.

**ಸೂಚಕಗಳು**

- ಆಶಯ ಸ್ಪಷ್ಟತೆ
- ಭಾಷಾ ಶೈಲಿ
- ಕ್ರಮೀಕರಣ

## ಟಿಪ್ಪಣಿ ಹೀಗೂ ಇರಬಹುದಲ್ಲವೇ?

ನಿಸರ್ಗದ ಮೇಲೆ ಮಾನವನು ಅವ್ಯಾಹತವಾಗಿ ನಡೆಸುತ್ತಿರುವ ದಾಳಿಯಿಂದಾಗಿ ಪರಿಸರ ನಾಶವಾಗತೊಡಗಿದೆ. ನಾನಾ ಉದ್ದೇಶಗಳಿಗಾಗಿ ಕಾಡಿನ ಮರಗಳನ್ನು ಕಡಿಯುತ್ತಾ ಬಂದುದರಿಂದ ಬಹಳಷ್ಟು ಕಾಡುಗಳಿಲ್ಲವಾಗಿದೆ. ಇದರಿಂದಾಗಿ ಪರಿಸರ ಮಾಲಿನ್ಯ ದಿನೇ ದಿನೇ ಹೆಚ್ಚುತ್ತಿದೆ. ವಾಯುಮಾಲಿನ್ಯ, ಜಲ ಮಾಲಿನ್ಯ, ಅತಿವೃಷ್ಟಿ, ಅನಾವೃಷ್ಟಿಯಿಂದಾಗಿ ಜನರು ತತ್ತರಿಸುತ್ತಿದ್ದಾರೆ. ಪರಿಸರ ಮಾಲಿನ್ಯದ ಭೀಕರ ಪರಿಣಾಮಗಳನ್ನು ಅರಿತುಕೊಂಡು ಎಲ್ಲರೂ ಎಚ್ಚೆತ್ತುಕೊಳ್ಳಬೇಕಾಗಿದೆ. ಪ್ಲಾಸ್ಟಿಕಿನ ಬಳಕೆಯನ್ನು ಕಡಿಮೆ ಮಾಡುವುದು, ಹೆಚ್ಚೆಚ್ಚು ಮರಗಿಡಗಳನ್ನು ನೆಟ್ಟು ಬೆಳೆಸುವುದು, ಪರಿಸರವನ್ನು ಸ್ವಚ್ಛವಾಗಿಡುವುದು, ಮಳೆಯ ನೀರನ್ನು ಸಂಗ್ರಹಿಸುವ ಇಂಗುಗುಂಡಿ ಗಳನ್ನು ಮಾಡುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ.

## ಓದುಗರ ಓಲೆ

ಪತ್ರಿಕೆಗಳಲ್ಲಿ ಬಂದ ಓದುಗರ ಓಲೆಯನ್ನು ವಿದ್ಯಾರ್ಥಿಗಳಿಗೆ ನೀಡುವುದು. ಅದರ ಸ್ವರೂಪದ ಕುರಿತು ಚರ್ಚಿಸುವುದು. ಓದುಗರ ಓಲೆಯ ಚೌಕಟ್ಟು ಹೇಗಿರಬೇಕು? ಎಂಬುದನ್ನು ಚರ್ಚೆಯ ಮೂಲಕ ಮಕ್ಕಳು ತಿಳಿದುಕೊಳ್ಳಲಿ. ಓದುಗರ ಓಲೆಯ ಉದ್ದೇಶವನ್ನು ತಿಳಿದುಕೊಳ್ಳಲಿ.

**ಗಮನಿಸಬೇಕಾದ ಅಂಶಗಳು**

- ಆಕರ್ಷಕವಾದ ಶಿರೋನಾಮೆ
- ಸಂಬೋಧನೆ, ಆಶಯ ಸ್ಪಷ್ಟತೆ
- ವಿಷಯದ ಕುರಿತು ಸ್ವಲ್ಪ ಅಭಿಪ್ರಾಯ ಬರೆದವರ ಹೆಸರು ಮತ್ತು ಸ್ಥಳ ಇರಬೇಕು.

**ಓದುಗರ ಓಲೆ ಹೀಗೂ ಇರಬಹುದು**

ಇತ್ತೀಚೆಗಿನ ದಿನಗಳಲ್ಲಿ ದವಳ ನಗರದ ಸೌಂದರ್ಯವು ದಿನೇ ದಿನೇ ಕಳೆಗುಂದುವುದು ಕಂಡುಬರುತ್ತಿದೆ. ಈ ಹಿಂದೆ ಈ ನಗರವು ಪ್ರಕೃತಿ ರಮಣೀಯವಾದ ಸೌಂದರ್ಯದಿಂದ ಕಂಗೊಳಿಸುತ್ತಿತ್ತು.ಇಲ್ಲಿಯ ಜನರು ತಮ್ಮ ಹಚ್ಚಹಸಿರಾದ ಭತ್ತದ ಗದ್ದೆ, ತುಂಬಿದ ಕೆರೆ ಸುಂದರವಾದ ಬೆಟ್ಟ ಗುಡ್ಡಗಳು ಮುಂತಾದ ಪ್ರಕೃತಿದತ್ತವಾದ ಸಂಪತ್ತನ್ನು ಹಣದ ವ್ಯಾಮೋಹದಿಂದ ದೊಡ್ಡ ದೊಡ್ಡ ಕಂಪೆನಿಗಳ ಕೈಗೆ ಹಸ್ತಾಂತರಿಸಿ ಕೈ ತೊಳೆದುಕೊಂಡರು. ಪರಿಣಾಮವಾಗಿ ಧವಳ ನಗರದಲ್ಲಿ ಕಾಂಕ್ರೀಟ್ ಕಾಡು ತಲೆಎತ್ತಿತು. ನಗರೀಕರಣದ ಭರಾಟೆಯಲ್ಲಿ ಧವಳ ನಗರದ ಮೂಲ ಪ್ರಕೃತಿ ಸೌಂದರ್ಯ

ಮಾಯವಾದುದಲ್ಲದೆ ಮೂರು ಬೆಳೆ ತೆಗೆದು ಸಂತ್ರಪ್ತ ಜೀವನ ಸಾಗಿಸುತ್ತಿದ್ದ ಜನರು ಕುಡಿಯುವ ನೀರಿಗೂ ಪರದಾಡುವಂತಾಯಿತು. ಈ ವಿಚಾರದಲ್ಲಿ ಜನತೆ ಎಚ್ಚೆತ್ತು ಕ್ರಮ ಕೈಗೊಳ್ಳದಿದ್ದರೆ ಮುಂದಿನ ತಲೆಮಾರಿಗೆ ಸಂಕಷ್ಟ ಕಟ್ಟಿಟ್ಟ ಬುತ್ತಿ. ಇದಕ್ಕೆ ಕಡಿವಾಣ ಹಾಕುವುದು ಸಾಧ್ಯವಿಲ್ಲವೇ?

ಶಮ

ಕಾಸರಗೋಡು

## ಮನವಿ ಪತ್ರ

ನಮ್ಮ ದೈನಂದಿನ ವ್ಯವಹಾರಗಳಲ್ಲಿ ಮನವಿ ಪತ್ರಕ್ಕೆ ಬಹಳಷ್ಟು ಪ್ರಾಧಾನ್ಯತೆ ಇದೆ. ನಿತ್ಯ ಜೀವನದಲ್ಲಿ ಅನೇಕ ಬಾರಿ ಬಳಸಬೇಕಾಗಿ ಬರುವ ಈ ಭಾಷಾ ವ್ಯವಹಾರ ರೂಪವನ್ನು ತಿಳಿದುಕೊಳ್ಳುವುದು ಅಗತ್ಯ. ಇದಕ್ಕಾಗಿ ಇಲ್ಲಿ ಮನವಿ ಪತ್ರ ಚಟುವಟಿಕೆ ನೀಡಲಾಗಿದೆ. ವಿಳಾಸ ಬರೆಯುವ ಕ್ರಮ, ಸಂಬೋಧನೆ, ಲೇಖನ ಚಿಹ್ನೆ, ಇರುವಂತೆ ಗಮನಿಸಬೇಕು. ಮಕ್ಕಳ ಮನವಿ ಪತ್ರ ಪ್ರದರ್ಶನದ ಅನಂತರ ಅಧ್ಯಾಪಕರು ಬರೆದ ಮನವಿ ಪತ್ರ ಪ್ರದರ್ಶಿಸುವುದು. ಇದನ್ನು ನೋಡಿ ಮಕ್ಕಳು ಮನವಿ ಪತ್ರವನ್ನು ಉತ್ತಮ ಪಡಿಸಲಿ.

ಇವರಿಂದ,

ರವಿನಂದನ

ಮೇಲಿನ ಮನೆ

ಹರೇಕಳ

ವರ್ಕಾಡಿ ಪಂಚಾಯತ್

ಇವರಿಗೆ ,

ಪಂಚಾಯತ್ ಅಧ್ಯಕ್ಷರು

ಎಣ್ಮಕಜೆ ಪಂಚಾಯತ್

ಮಾನ್ಯರೇ ,

ವಿಷಯ: ಕೈಗಾರಿಕಾ ಸ್ಥಾಪನೆಯನ್ನು ರದ್ದುಗೊಳಿಸುವ ಬಗ್ಗೆ.

ವರ್ಕಾಡಿ ಪಂಚಾಯತಿಗೊಳಪಟ್ಟ ಹರೇಕಳ ಎಂಬಲ್ಲಿ ರಸಗೊಬ್ಬರ ಕಾರ್ಖಾನೆಯನ್ನು ಸ್ಥಾಪಿಸುವ ಬಗ್ಗೆ ಕೆಲವು ಮೂಲಗಳಿಂದ ತಿಳಿದು ಬಂದಿರುತ್ತದೆ. ಆದರೆ ಈ ಸ್ಥಳವು ಅತ್ಯಂತ ಜನನಿಬಿಡ ಪ್ರದೇಶವಾಗಿದ್ದು ಹಲವು ಕುಟುಂಬಗಳು ಇಲ್ಲಿ ವಾಸಿಸುತ್ತಿವೆ. ಮಾತ್ರವಲ್ಲದೆ ಇಲ್ಲಿಯ ಸುತ್ತಮುತ್ತಲ ಪ್ರದೇಶವು ಫಲವತ್ತಾದ ಕೃಷಿ ಭೂಮಿಯಾಗಿದೆ. ಮೇಲಿನ ಯೋಜನೆಯನ್ನು ಕಾರ್ಯಗತಗೊಳಿಸಿದರೆ ಇಲ್ಲಿ ವಾಸಿಸುವ ಜನರಿಗೆ ವಿವಿಧ ರೀತಿಯ ಕೃಷಿ ಚಟುವಟಿಕೆಗಳಿಗೆ, ಪಕ್ಷಿಸಂಕುಲ ಜಲಮೂಲಗಳಿಗೆ ಹಾನಿ ಉಂಟಾಗಿ ಪ್ರಾಕೃತಿಕ ಅಸಮತೋಲನ ಉಂಟಾಗಬಹುದು. ಆದುದರಿಂದ ಕೂಡಲೇ ಈ ಯೋಜನೆಯನ್ನು ಪ್ರಸ್ತುತ ಸ್ಥಳದಲ್ಲಿ ಸ್ಥಾಪಿಸುವುದನ್ನು ಕೈಬಿಟ್ಟು ದೂರದ ಜನವಸತಿ ಇಲ್ಲದ ಪ್ರದೇಶದಲ್ಲಿ ಕೈಗೊಂಡು ಇಲ್ಲಿನ ನಾಗರಿಕರು ಮನವಿಗೆ ಸ್ಪಂದಿಸಿ ಪರಿಹಾರವನ್ನು ಕಂಡುಕೊಳ್ಳಬೇಕಾಗಿ ಈ ಮೂಲಕ ವಿನಂತಿಸಿಕೊಳ್ಳುತ್ತೇವೆ.

ಇತಿ,

ತಮ್ಮ ವಿಶ್ವಾಸಿ

ರವಿನಂದನ

ಸ್ಥಳ: ವರ್ಕಾಡಿ

ದಿನಾಂಕ: 29.03.2024

## ಭಾಷಣ

ಕೊಟ್ಟಿರುವ ವಿಷಯದ ಅರ್ಥ ಕೆಡದಂತೆ ಮಕ್ಕಳು ತಮ್ಮ ಕಲ್ಪನೆಗನುಗುಣವಾಗಿ ಲಿಖಿತ ಭಾಷಣ ತಯಾರಿಸಲಿ. ವೈಯಕ್ತಿಕವಾಗಿ ಬರೆದು ಮಂಡಿಸಲಿ. ಗುಂಪಿನಲ್ಲಿ ಉತ್ತಮ ಪಡಿಸಲಿ. ಅಧ್ಯಾಪಕರು ಚಾರ್ಟ್ ನಲ್ಲಿ ಬರೆದು ಪ್ರದರ್ಶಿಸಲಿ.

## ಭಾಷಣವನ್ನು ಹೀಗೂ ಬರೆಯಬಹುದಲ್ಲವೇ

ಗೌರವಾನ್ವಿತ ತೀರ್ಪುಗಾರರೇ, ಅಧ್ಯಾಪಕರೇ, ಮತ್ತು ನನ್ನ ಪ್ರೀತಿಯ ಗೆಳೆಯ ಗೆಳತಿಯರೇ, ಈಗ ಪ್ರಕೃತಿ 'ಸೌಂದರ್ಯದ ಮಹತ್ವ' ಎಂಬ ವಿಷಯದ ಕುರಿತು ಮಾತನಾಡಲು ನಿಮ್ಮ ಮುಂದೆ ಬಂದು ನಿಂತಿದ್ದೇನೆ. ಪ್ರಕೃತಿಯ ಸುಂದರ ಮಡಿಲು ದೇವರು ನಮಗೆ ಕೊಟ್ಟ ವರ. "ಹಸಿರು ನಮ್ಮೆಲ್ಲರ ಉಸಿರು" ಎಂಬ ಮಾತು ಬಹಳ ಅರ್ಥಗರ್ಭಿತ. ಗಿಡ ಮರ ಪಕ್ಷಿಗಳು ಮತ್ತು ಎಲ್ಲ ಜೀವಸಂಕುಲದ

ಸೊಬಗನ್ನು ಪರಿಸರದಲ್ಲಿ ಕಾಣಬಹುದು. ನಿಸರ್ಗದ ಒಡಲು ಮತ್ತು ತಾಯಿಯ ಮಡಿಲಿಗೆ ಯಾವುದೂ ಸರಿಸಾಟಿಯಾಗದು. ನಮ್ಮ ಸುತ್ತಮುತ್ತ ಇರುವ ಬೆಟ್ಟ ಗುಡ್ಡಗಳು, ಮರ-ಗಿಡಗಳು, ನಮ್ಮ ವಾಸಸ್ಥಳ ಸಾಗರ, ಸರೋವರಗಳು, ಹಳ್ಳ ಕೊಳ್ಳಗಳು, ಪಶುಪಕ್ಷಿಗಳು, ಅರಣ್ಯ, ಗಾಳಿ, ಆಕಾಶ ಇವೆಲ್ಲವೂ ಸೇರಿ ಪರಿಸರವೆನಿಸಿದೆ. ನದಿ, ಸಮುದ್ರ, ಸರೋವರ, ಅರಣ್ಯ, ಬೆಟ್ಟಗುಡ್ಡ, ಪರ್ವತ, ಮುಂತಾದವುಗಳು ಪ್ರಕೃತಿದತ್ತ ಪರಿಸರವಾದರೆ ಕಟ್ಟಡಗಳು, ಕೃಷಿಭೂಮಿ, ಕೈಗಾರಿಕೆಗಳು, ನಗರಗಳು, ಅಣೆಕಟ್ಟುಗಳು, ರಸ್ತೆಗಳು ಮಾನವ ನಿರ್ಮಿತ ಪರಿಸರವಾಗಿದೆ.

ಪರಿಸರದ ವಿವಿಧ ಘಟಕಗಳನ್ನು ಮನುಷ್ಯ ತನ್ನ ಅನುಕೂಲಕ್ಕೆ ಹೇಗೆ ಬಳಸಿಕೊಂಡು ಲಾಭ ಪಡೆದಿದ್ದಾನೆಯೋ ಹಾಗೆಯೇ ಅವನ ಎಡೆಬಿಡದ  ಚಟುವಟಿಕೆಗಳು ಪ್ರಕೃತಿಗೆ ಹಾನಿಕಾರಕವಾಗಿಯೂ ಪರಿಣಮಿಸುತ್ತವೆ. ಮನುಷ್ಯ ತನ್ನ ಸ್ವಾರ್ಥಕ್ಕಾಗಿ ಪರಿಸರವನ್ನು ದುರ್ಬಳಕೆ ಮಾಡುತ್ತಿದ್ದಾನೆ. ಪರಿಸರವನ್ನು ಹಾಳು ಮಾಡುತ್ತಿದ್ದಾನೆ. ಇದರಿಂದಾಗಿ ಅತಿವೃಷ್ಟಿ ಅನಾವೃಷ್ಟಿ, ಹವಾಮಾನದ ಏರುಪೇರುಗಳು ಸಂಭವಿಸಿ ಸುನಾಮಿ, ಪ್ರವಾಹ, ಚಂಡಮಾರುತ ಮತ್ತು ಭೂಕಂಪ ಮೊದಲಾದ ಪ್ರಕೃತಿ ವಿಕೋಪಗಳು ಉಂಟಾಗುತ್ತಿವೆ.

ಮರಗಿಡಗಳನ್ನು ಕಡಿದು ಪ್ರಕೃತಿ ಸೌಂದರ್ಯವನ್ನು ನಾಶ ಮಾಡುತ್ತಿರುವುದರಿಂದಲೇ ಇಂದು ಬರ ಪರಿಸ್ಥಿತಿ ಉಂಟಾಗಿದೆ. ಕುಡಿಯಲು ನೀರಿಲ್ಲ. ಜನರಿಗೆ ಜಾನುವಾರುಗಳಿಗೆ ಆಹಾರ ಮತ್ತು ನೀರಿನ ಅಭಾವ ಉಂಟಾಗಿ ಜನ ಕಷ್ಟಪಡುವಂತಾಗುತ್ತದೆ. ಅತಿವೃಷ್ಟಿಯಿಂದಾಗಿ ಮನೆಗಳು ಜಲಾವೃತವಾಗುತ್ತವೆ. ಕೆಲವು ವರ್ಷಗಳ ಹಿಂದೆ ಸುನಾಮಿಯಂತಹ ಪ್ರಾಕೃತಿಕ ವಿಕೋಪಗಳು ಸಂಭವಿಸಿ ಸಮುದ್ರ ತೀರದ ಕೆಲವು ಪ್ರದೇಶಗಳು ಕಡಲ ತೆರೆಗಳಿಂದ ಕೊಚ್ಚಿ ಹೋಗಿ ಸಾವಿರಾರು ಜನರನ್ನು ಬಲಿ ತೆಗೆದುಕೊಂಡಿತು. ಭೂಕಂಪದಿಂದ ಮನೆಗಳು ಕಟ್ಟಡಗಳು ಕುಸಿದು ಬೀಳುತ್ತಿವೆ. ಇತ್ತೀಚೆಗೆ ಜಾಗತಿಕ ತಾಪಮಾನ ಹೆಚ್ಚುತ್ತಿದೆ. ಇದರಿಂದಾಗಿ ಹಿಮಗಡ್ಡೆಗಳು ಶೀಘ್ರವಾಗಿ  ಕರಗುತ್ತಿರುವುದರಿಂದ ನದಿಗಳಲ್ಲಿ ಪ್ರವಾಹ ಉಂಟಾಗಿ ಸಮುದ್ರದ ನೀರಿನ ಮಟ್ಟ ಏರುತ್ತಿದೆ ಎಂದು ಹವಾಮಾನ ತಜ್ಞರು ಎಚ್ಚರಿಕೆ ಕೊಡುತ್ತಿದ್ದಾರೆ. ಇವೆಲ್ಲವೂ ಅಪಾಯದ ಸೂಚನೆಗಳಾಗಿವೆ.

ನಮ್ಮ ಪರಿಸರ ಚೆನ್ನಾಗಿದ್ದರಷ್ಟೇ ನಾವು ಚೆನ್ನಾಗಿರುತ್ತೇವೆ. ಇಂತಹ ಪರಿಸರವನ್ನು ಉಳಿಸಿ ಬೆಳೆಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಸ್ವಾರ್ಥಕ್ಕಾಗಿ ನಾವು ಪರಿಸರವನ್ನು ಹಾಳು ಮಾಡಿದರೆ ಪರಿಸರ ನಮ್ಮನ್ನು ಉಳಿಸುವುದಿಲ್ಲ. ಪ್ರತಿಯೊಬ್ಬರು ಒಂದೊಂದು ಮರ ನೆಡುತ್ತಾ ಪರಿಸರ ಉಳಿಸಿ ಬೆಳೆಸುವಲ್ಲಿ ಕೈಜೋಡಿಸಬೇಕು. ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡಿ ಪರಿಸರ ಜಾಗೃತಿ ಮೂಡಿಸುವ ಕರ್ತವ್ಯ ನಮ್ಮದಾಗಬೇಕು.

**ಲೇಖನ ಚಿಹ್ನೆಗಳು:**

ಲೇಖನ ಚಿಹ್ನೆಗಳು ವಾಕ್ಯದ ಪ್ಯಾರಾದ ಅರ್ಥ ಸ್ಪಷ್ಟತೆಗೆ ಅಗತ್ಯ. ಕಥೆಗಳಲ್ಲಿ ಲೇಖನ ಚಿಹ್ನೆಗಳು ಹೇಗೆ ಆಶಯ ಸ್ಪಷ್ಟತೆಯನ್ನು ಉಂಟುಮಾಡುತ್ತವೆ ಎಂಬುದನ್ನು ವಿದ್ಯಾರ್ಥಿಗಳು ತಿಳಿಯಲಿ. ಈ ನಿಟ್ಟಿನಲ್ಲಿ ಕೊಟ್ಟಿರುವ ಗದ್ಯಭಾಗವನ್ನು ಓದಿ ಸೂಕ್ತವಾದ ಲೇಖನ ಚಿಹ್ನೆಗಳನ್ನು ಅಳವಡಿಸಿ ಪುನಃ ಬರೆಯಲಿ. ಅಧ್ಯಾಪಕರ ಮಾದರಿಯ ಸಹಾಯದಿಂದ ಸ್ವಯಂ ಮೌಲ್ಯಮಾಪನ ನಡೆಸಿ ಉತ್ತಮ ಪಡಿಸಲಿ. ವಿವಿಧ ರೀತಿಯ ಲೇಖನ ಚಿಹ್ನೆಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುವುದು.

, ಅಲ್ಪ ವಿರಾಮ

; ಅರ್ಧವಿರಾಮ

. ಪೂರ್ಣವಿರಾಮ

! ಆಶ್ಚರ್ಯ ಸೂಚಕ ಚಿಹ್ನೆ

? ಪ್ರಶ್ನಾರ್ಥಕ ಚಿಹ್ನೆ

‘ ’ ವಿಶೇಷತೆಯ ಸೂಚಕ ಚಿಹ್ನೆ

“ ” ಉದ್ಧರಣ ಚಿಹ್ನೆ

- ಅಡ್ಡಗೀಚು / ಸಣ್ಣಗೆರೆ /ಕೂಡುಗೆರೆ

: ವಿವರಣ ಸೂಚಕ

ಒಂದು ಕಾಡಿನಲ್ಲಿ ಆಲದ ಮರದ ಕೆಳಗೆ ಒಂದು ಜಿಂಕೆ ವಾಸವಾಗಿತ್ತು. ಆ ಕಾಡಿನಲ್ಲಿದ್ದ ನರಿಯೊಂದಕ್ಕೆ ಜಿಂಕೆಯ ಮಾಂಸ ತಿನ್ನಬೇಕೆಂಬ ಆಸೆಯಾಯಿತು. 'ಹೇಗೆ ತಿನ್ನಲಿ?' ಎಂದು ಯೋಚಿಸಿತು. ಒಂದು ದಿನ ಜಿಂಕೆ ಮೇಯುತಿದ್ದಾಗ “ಅಬ್ಬಾ! ಈ ಜಿಂಕೆ ಅದೆಷ್ಟು ದಷ್ಟಪುಷ್ಟವಾಗಿದೆ! “ಎನ್ನುತ್ತಾ ಹತ್ತಿರ ಹೋಗಿ ಸುಮ್ಮನೆ ಕಣ್ಣೀರು ಸುರಿಸಲಾರಂಭಿಸಿತು. “ಯಾಕೆ ಅಳುತ್ತಿ ನರಿಯಣ್ಣ? ಅಂತದ್ದೇನಾಯಿತು? ಎಂದು ಜಿಂಕೆ ಕೇಳಿತು. ಏನು ಹೇಳಲಿ? ಎಷ್ಟೊಂದು ಜನ ಅಣ್ಣ ತಮ್ಮಂದಿರು ಇದ್ದೆವು. ಎಲ್ಲರನ್ನು ಕಳೆದುಕೊಂಡು ಈಗ ಏಕಾಂಗಿಯಾಗಿದ್ದೇನೆ. ಈಗ ಬೇಜಾರಾಗಿದೆ ಎಂದಿತು. ನರಿಯ ವಂಚನೆಯನ್ನು ಅರಿತ ಜಿಂಕೆ ಅಲ್ಲಿಂದ ಪಲಾಯನ ಮಾಡಿತು.

## ಪೂರಕ ಓದಿಗೆ

ಭಾರತೀಯ ಫ್ಯಾಕ್ಟರಿ ದುರಂತಗಳಲ್ಲೇ ಅತ್ಯಂತ ಭಯಾನಕ ದುರಂತ ಎಂದು ದಾಖಲಾಗಿರುವ ಅವಘಢ ಎಂದರೆ ಅದು ಭೋಪಾಲ್ ಅನಿಲ ದುರಂತ. ಇದು ನಡೆದದ್ದು 2, ಡಿಸೆಂಬರ್ 1984 ರ ರಾತ್ರಿ. ಆ ಬೃಹತ್ ಫ್ಯಾಕ್ಟರಿಯ ಹೆಸರು ಯೂನಿಯನ್ ಕಾರ್ಬೈಡ್ ಕಂಪೆನಿ. ಇದು ಒಂದು ಕ್ರಿಮಿನಾಶಕಗಳನ್ನು ತಯಾರಿಸುವ ಕಂಪೆನಿ. ಇದು ಅಮೇರಿಕಾ ಮೂಲದ ಕಂಪನಿಯಾಗಿದ್ದು 1969 ರಲ್ಲಿ ತನ್ನ ಉತ್ಪಾದನೆಯನ್ನು ಮಧ್ಯಪ್ರದೇಶದ ಭೋಪಾಲ್ನಲ್ಲಿ ಆರಂಭಿಸಿತ್ತು. ಇದು ಮೀಥೈಲ್ ಐಸೋಸಯನೈಟ್ ನ್ನು ಬಳಸಿ ಕಾರ್ಬಾರಿಲ್ ಎಂಬ ಕ್ರಿಮಿನಾಶಕವನ್ನು ತಯಾರಿಸುತ್ತಿತ್ತು.

ಅಂದು ನಡೆದದ್ದೇನು? ಅಂದು ಡಿಸೆಂಬರ್ 2 ರ ರಾತ್ರಿ 2 ಗಂಟೆ: ಈ ಫ್ಯಾಕ್ಟರಿಯ ಮೀಥೈಲ್ ಐಸೋಸಯನೈಟ್ ತುಂಬಿದ್ದ ದೊಡ್ಡ ಟ್ಯಾಂಕ್ ನಲ್ಲಿ ಗ್ಯಾಸ್ ಸೋರಿಕೆ ಆರಂಭಗೊಂಡಿತ್ತು! ಫ್ಯಾಕ್ಟರಿಯ ಸೈರನ್ ಹದಿನೈದು ನಿಮಿಷಗಳಲ್ಲೇ ಜೋರಾಗಿ ಸದ್ದು ಮಾಡಿತ್ತು. ಸ್ವಲ್ಪ ಕಾಲದಲ್ಲೇ ಈ ಸೈರನ್ ಮೊಳಗುವಿಕೆ ನಿಂತು ಹೋಗಿತ್ತು! ತಕ್ಷಣ ಅಲ್ಲಿಯ ಕೆಲವು ಕಾರ್ಮಿಕರು ಪೋಲಿಸ್ ಸ್ಟೇಷನ್ ಗೆ ಹೋಗಿ ವಿಷಯ ತಿಳಿಸಿದರು.

ಅಂದು ಭೋಪಾಲ್ ನಲ್ಲಿ ಮಲಗಿದ್ದ ಬಹುತೇಕ ಜನರಿಗೆ ಗ್ಯಾಸ್ ಲೀಕೇಜ್ ನ ಅನುಭವವಾಗಿತ್ತು. ಮಲಗಿದ್ದ ಇನ್ನೂ ಕೆಲವರು ಹೊರಗೆ ಆಗುತ್ತಿದ್ದ ಕೂಗಾಟ ಚೀರಾಟಗಳನ್ನು ನೋಡಲು ಬಾಗಿಲು ತೆಗೆದಿದ್ದರಿಂದ ಈ ಅನಿಲವನ್ನು ಸೇವಿಸುವಂತಾಗಿತ್ತು!

## ಅನಿಲ ಸೇವನೆಯಿಂದ ಉಂಟಾದ ಪರಿಣಾಮ

ಹೇಳಿ ಕೇಳಿ ಮೀಥೈಲ್ ಐಸೋಸಯನೈಟ್ ಒಂದು ವಿಷಾನಿಲ. ಇದನ್ನು ಸೇವಿಸಿದ ಅಂದಿನ ಬಹುಮಂದಿಗೆ ಭಯಾನಕ ಕಣ್ಣಿನ ಉರಿ, ಸತತ ಕೆಮ್ಮು, ಉಸಿರಾಟದಲ್ಲಿ ತೊಂದರೆ, ಗಂಟಲು ಉರಿ, ಹೊಟ್ಟೆನೋವು, ವಾಂತಿಯಂತಹ ವಿಕಾರಗಳಿಂದ ಜನರು ನರಳಲು ಪ್ರಾರಂಭಿಸಿದರು. ಹೊರಗೆ ಓಡಿ ಬಂದವರು ಹಾಗೂ ವಾಹನಗಳಲ್ಲಿ ಪ್ರಯಾಣಿಸುತ್ತಿದ್ದವರು ಬಹುಬೇಗ ಈ ತೊಂದರೆಗಳಿಂದ ನರಳಲಾರಂಭಿಸಿದರು. ಬೆಳಗಿನ ಹೊತ್ತಿಗೆ ಆದಾಗಲೇ ಸಾವಿರಾರು ಜನರು ಸತ್ತಿದ್ದರು!

## ಈ ದುರಂತದಲ್ಲಿ ಸತ್ತವರೆಷ್ಟು?

ಈ ಮೀಥೈಲ್ ಐಸೋಸಯನೈಟ್ ಅನಿಲದ ಸೋರಿಕೆಯಿಂದ ಸುಮಾರು 500,000 ರಷ್ಟು ಜನ ಬಾಧಿತರಾಗಿದ್ದರು. ಅಂದಿನ ಮಧ್ಯಪ್ರದೇಶದ ಸರ್ಕಾರದ ವರದಿಯ ಪ್ರಕಾರ ಈ ದುರಂತದಲ್ಲಿ ಮಡಿದವರ ಸಂಖ್ಯೆ 3,787. ಇದರಲ್ಲಿ ಬದುಕುಳಿದು ಘಾಸಿಗೊಂಡವರ ಸಂಖ್ಯೆ 5,74,366 ಎಂದು ಮಧ್ಯಪ್ರದೇಶ ಸರ್ಕಾರ ತಿಳಿಸಿತ್ತು! ಆದರೆ ಬೇರೆ ಸಮೀಕ್ಷೆಗಳ ಪ್ರಕಾರ ಸತ್ತವರ ಸಂಖ್ಯೆ 8,000 ಹಾಗೂ 8000 ಕ್ಕೂ ಹೆಚ್ಚು ಜನ ಆನಂತರದ ಅನಿಲ ಸಂಬಂಧಿತ ಕಾಯಿಲೆಗಳಿಂದ ಸತ್ತಿದ್ದಾರೆ ಎಂದು ವರದಿಗಳು ತಿಳಿಸುತ್ತವೆ. ಅಂದು ಸೋರಿಕೆಯಾದ ವಿಷಾನಿಲದ ಪರಿಮಾಣ ಬರೋಬ್ಬರಿ 45 ಟನ್ ಮೀಥೈಲ್ ಐಸೋಸಯನೈಟ್!

## ದುರಂತದಿಂದ ಕಲಿಯಬೇಕಾದ ಪಾಠ

ಈ ಭೋಪಾಲ್ ಅನಿಲ ಸೋರಿಕಾ ದುರಂತದಿಂದ ನಾವು ಕಲಿಯಬೇಕಾದ ಪಾಠ ಬೇಕಾದಷ್ಟಿದೆ: ಅತಿಯಾದ ಕೈಗಾರೀಕರಣ ಎಂದೂ ಅಪಾಯವೇ ಎಂಬುದನ್ನು ಈ ಘಟನೆ ಸಾರಿ ಹೇಳುತ್ತದೆ. ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಜನವಸತೀ ಪ್ರದೇಶದಿಂದ ದೂರದಲ್ಲಿ ಸ್ಥಾಪಿಸಬೇಕು. ಕೈಗಾರಿಕೆಗಳಲ್ಲಿ ಹೆಚ್ಚು ಹೆಚ್ಚು ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು. ಕೈಗಾರಿಕಾ ಆಡಳಿತ ಮಂಡಳಿಗಳು ಆಗಾಗ್ಗೆ ಸುರಕ್ಷತಾ ತಪಾಸಣೆಗಳ ಬಗ್ಗೆ ಹೆಚ್ಚು ಗಮನವಹಿಸಬೇಕು. ಮಿಥೈಲ್ ಐಸೋಸಯನೈಟ್ ನಂತಹ ರಾಸಾಯನಿಕಗಳನ್ನು ಬಳಸುವ ಕೈಗಾರಿಕೆಗಳನ್ನು ಜನ ವಸತಿಯಿಂದ ಬಹುದೂರದ ಪ್ರದೇಶದಲ್ಲಿ ಸ್ಥಾಪಿಸಬೇಕು ಅಲ್ಲದೆ ಇಂತಹ ಕೈಗಾರಿಕೆಗಳಲ್ಲಿ ಕಾರ್ಯ ನಿರ್ವಹಿಸುವ ಕಾರ್ಮಿಕರ ಸುರಕ್ಷತೆಗೆ ಅತೀ ಹೆಚ್ಚು ಗಮನ ನೀಡಬೇಕು. ವಿಜ್ಞಾನದಿಂದಾದ ಕೈಗಾರಿಕೀಕರಣ ಮಾನವನ ಜೀವವನ್ನೇ ತೆಗೆಯುವ ಮಾರಕ ತಾಣಗಳಾಗಬಾರದು.

* * *